# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ ಅಧಿನಿಯಮ, 1966

(ಕರ್ನಾಟಕ ರಾಜ್ಯಪತ್ರ, ಗುರುವಾರ ಫೆಬ್ರವರಿ 19, 2004, ಭಾಗ–4ಎ, ಪುಟ 90 ರಿಂದ 104ರವರೆಗೆ ಪ್ರಕಟಿಸಲಾಗಿದೆ)

## ಪ್ರಕರಣಗಳ ಅನುಕ್ರಮಣಿಕೆ

**ಪ್ರಸ್ತಾವನೆ**

**ಪ್ರಕರಣಗಳು:**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಮಂಡಲಿಯ ನಿಗಮನ
4. ಮಂಡಲಿಯ ರಚನೆ
5. ಸದಸ್ಯರ ಪದಾವಧಿ
6. ಸದಸ್ಯರ ಅನರ್ಹತೆಗಳು
7. ಕೋ–ಆಪ್ಟ್ ಮಾಡಿಕೊಂಡ ವ್ಯಕ್ತಿಗಳ ಅನರ್ಹತೆಗಳು
8. ಅನರ್ಹತೆಗಳ ಕಾರಣದಿಂದ ಉಂಟಾಗುವ ಖಾಲಿಸ್ಥಾನ
9. ಗೈರುಹಾಜರಿಯ ಕಾರಣದಿಂದ ಉಂಟಾಗುವ ಖಾಲಿಸ್ಥಾನ
10. ಖಾಲಿಸ್ಥಾನವನ್ನು ಪ್ರಕಟಿಸುವುದು
11. ಸದಸ್ಯತ್ವದಿಂದ ತೆಗೆದುಹಾಕುವುದು
12. ಮಂಡಲಿಯ ಸದಸ್ಯರ ರಾಜೀನಾಮೆ
13. ಸಾಂದರ್ಭಿಕ ಖಾಲಿ ಸ್ಥಾನಗಳು
14. ಮಂಡಲಿಯೊಂದಿಗೆ ವ್ಯಕ್ತಿಗಳ ತಾತ್ಕಾಲಿಕ ಸಂಯೋಜನೆ, ಇತ್ಯಾದಿ
15. ಮಂಡಲಿಯ ಅಧಿಕಾರಗಳು ಮತ್ತು ಕರ್ತವ್ಯಗಳು
16. ಮಂಡಲಿಯ ಸಭೆಗಳು
17. ಅಧ್ಯಕ್ಷನ ಅಧಿಕಾರಗಳು ಮತ್ತು ಕರ್ತವ್ಯಗಳು
18. ಕಾರ್ಯದರ್ಶಿಯ ನೇಮಕಾತಿ, ಅಧಿಕಾರಗಳು ಮತ್ತು ಕರ್ತವ್ಯಗಳು
19. ಇತರ ಅಧಿಕಾರಿಗಳ ಮತ್ತು ನೌಕರರ ನೇಮಕಾತಿ, ಇತ್ಯಾದಿ
20. ಸಿಬ್ಬಂದಿಯ ಸಂಬಳ ಮತ್ತು ಭತ್ಯೆಗಳು
21. ಪರೀಕ್ಷಕರ ಸಮಿತಿ
22. ಇತರ ಸಮಿತಿಗಳು
23. ದುರ್ನಡತೆ ಅಥವಾ ನಿರ್ಲಕ್ಷ್ಯಕ್ಕಾಗಿ ಪರೀಕ್ಷಕರ ನೇಮಕಾತಿಯನ್ನು ಕೊನೆಗೊಳಿಸುವುದು
24. ಮಂಡಲಿಯ ನಿಧಿ

25. ವಾರ್ಷಿಕ ಲೆಕ್ಕಪತ್ರಗಳು ಮತ್ತು ಹಣಕಾಸು ಅಂದಾಜುಗಳು

26. ಮಂಡಲಿಯ ವಿನಿಯಮ ರಚನಾಧಿಕಾರ

27. ವಿನಿಯಮಗಳಿಗೆ ರಾಜ್ಯ ಸರ್ಕಾರದ ಅನುಮೋದನೆ

28. ಮೊದಲ ವಿನಿಯಮಗಳು ಮತ್ತು ಉಪವಿಧಿಗಳ ರಚನೆ

29. ವಿಶ್ವವಿದ್ಯಾನಿಲಯದ ಪ್ರತಿನಿಧಿಗಳ ಮೊದಲ ನೇಮಕಾತಿ

30. ಖಾಲಿ ಸ್ಥಾನಗಳು, ಇತ್ಯಾದಿಗಳ ಕಾರಣದಿಂದಾಗಿ ವ್ಯವಹರಣೆಗಳು ಅಸಿಂಧುವಾಗದಿರುವುದು

31. ಉಪವಿಧಿಗಳನ್ನು ರಚಿಸಲು ಮಂಡಲಿಯ ಅಧಿಕಾರ

32. ಮಂಡಲಿಯು ಒದಗಿಸಬೇಕಾದ ಮಾಹಿತಿ, ವಿವರ ಪಟ್ಟಿಕೆಗಳು, ಇತ್ಯಾದಿ

33. ರಾಜ್ಯ ಸರ್ಕಾರದ ಅಧಿಕಾರಗಳು

34. ನಿಯಮ ರಚನಾಧಿಕಾರ

35. ಅಧ್ಯಕ್ಷನ, ಉಪಾಧ್ಯಕ್ಷ, ಮತ್ತು ಸದಸ್ಯರ ಜವಾಬ್ದಾರಿ

36. ನಿರ್ದೇಶಕ ಅಥವಾ ಉಪಾಧ್ಯಕ್ಷ , ಮೊದಲಾದವರು ಲೋಕನೌಕರರಾಗಿರುವುದು

37. ಸದ್ಭಾವನೆಯಿಂದ ಮಾಡಿದ ಕಾರ್ಯಗಳಿಗಾಗಿ ದಾವೆಗಳ ಪ್ರತಿಷೇಧ, ಇತ್ಯಾದಿ

38. ದಾವೆಗಳಿಗಾಗಿ ಮುಂಚಿನ ನೋಟೀಸು, ಇತ್ಯಾದಿ

39. ತೊಂದರೆಗಳ ನಿವಾರಣೆ

40. ನಿರಸನ

41. (ಬಿಟ್ಟುಬಿಡಲಾಗಿದೆ.)

ಅಧಿಸೂಚನೆಗಳು

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

### I

**1966ರ ಅಧಿನಿಯಮ 16.–** ಪ್ರಸ್ತುತ, ಸಾರ್ವಜನಿಕ ಶಿಕ್ಷಣ ಇಲಾಖೆಯ ಭಾಗವಾಗಿರುವ ಪರೀಕ್ಷಾ ಘಟಕವೊಂದು ಎಸ್.ಎಸ್.ಎಲ್.ಸಿ. ಪರೀಕ್ಷೆಯೂ ಸೇರಿದಂತೆ ಸುಮಾರು 67 ಸಾರ್ವಜನಿಕ ಪರೀಕ್ಷೆಗಳನ್ನು ನಡೆಸುತ್ತದೆ.

ಎಸ್.ಎಸ್.ಎಲ್.ಸಿ. ಪರೀಕ್ಷೆ ಹಾಗೂ ಇತರ ಸಾರ್ವಜನಿಕ ಪರೀಕ್ಷೆಗಳನ್ನು ಸಮರ್ಥವಾಗಿ ನಡೆಸುವುದಕ್ಕಾಗಿ ಮತ್ತು ಫಲಿತಾಂಶವನ್ನು ಸಕಾಲಿಕವಾಗಿ ಘೋಷಿಸುವುದಕ್ಕಾಗಿ ಹಾಗೂ ಸಾರ್ವಜನಿಕ ಪರೀಕ್ಷೆಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಶೀಘ್ರ ವಿಲೇವಾರಿ ಮಾಡುವುದಕ್ಕಾಗಿ ಶಾಸನಬದ್ಧ ಅಧಿಕಾರವುಳ್ಳ ಸ್ವತಂತ್ರ ಮಂಡಲಿಯೊಂದನ್ನು ಸ್ಥಾಪಿಸುವುದು ವಿಹಿತ ಎಂದು ಭಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಮೈಸೂರು ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV–2ಎ, ದಿನಾಂಕ: 27.01.1966ರ ಸಂಖ್ಯೆ: 12ರ ಪುಟ 22 ರಲ್ಲಿ ಪ್ರಕಟಿಸಲಾಗಿದೆ.)

## II

**1976ರ ತಿದ್ದುಪಡಿ ಅಧಿನಿಯಮ 9.–** 1966ರ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಲಿ ಅಧಿನಿಯಮದ 25ನೇ ಪ್ರಕರಣದ (3)ನೇ ಉಪ-ಪ್ರಕರಣದ ವಿವರಣೆಯ ಮೇರೆಗೆ, ವರ್ಷ ಎಂದರೆ ಆಗಸ್ಟ್ ಮೊದಲನೇ ದಿನದಿಂದ ಪ್ರಾರಂಭವಾಗುವ ವರ್ಷ. ಇದು, ಸರ್ಕಾರದ ಅಧಿಕೃತ ವರ್ಷದೊಂದಿಗೆ ಸರಿಹೊಂದದ ಕಾರಣ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿಯ ಲೆಕ್ಕಪತ್ರಗಳನ್ನು ಸಂಕಲಿಸಲು ಅನಾನುಕೂಲವಾಗುತ್ತದೆ.

ಆದ್ದರಿಂದ, ಸರ್ಕಾರದ ಅಧಿಕೃತ ವರ್ಷಕ್ಕೆ ಸರಿಹೊಂದಿಸುವ ಸಲುವಾಗಿ, ಪ್ರತಿ ವರ್ಷ ಏಪ್ರಿಲ್ 1ನೇ ದಿನದಿಂದ ಆ ಮುಂದಿನ ಮಾರ್ಚ್ ಅಂತ್ಯದವರೆಗಿನ ವರ್ಷವನ್ನು ಮಂಡಲಿಯ ವರ್ಷವನ್ನಾಗಿ ಅಳವಡಿಸಿಕೊಳ್ಳಲು ಉದ್ದೇಶಿಸಲಾಗಿದೆ. ಈ ಬದಲಾವಣೆಯನ್ನು ಪರಂತುಕದ ಮೂಲಕ, ಕೂಡಲೇ ಜಾರಿಗೆ ತರಲು ಉದ್ದೇಶಿಸಲಾಗಿದೆ. 1975-76ನೇ ವರ್ಷಕ್ಕೆ ಸಂಬಂಧಿಸಿದಂತೆ ವರ್ಷ ಎಂದರೆ, 1975ರ ಆಗಸ್ಟ್ ಮೊದಲನೇ ದಿನದಿಂದ ಪ್ರಾರಂಭವಾಗಿ 1976ರ ಮಾರ್ಚ್ ಮೂವತ್ತೊಂದನೇ ದಿನಕ್ಕೆ ಕೊನೆಯಾಗುವ ಎಂಟು ತಿಂಗಳುಗಳ ಅವಧಿ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV-2ಎ, ದಿನಾಂಕ: 31.03.1976ರ ಸಂಖ್ಯೆ: 628 ರಲ್ಲಿ ಪ್ರಕಟಿಸಲಾಗಿದೆ).

## III

**1977ರ ತಿದ್ದುಪಡಿ ಅಧಿನಿಯಮ 19.–** ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಲಿ ಅಧಿನಿಯಮ, 1966ರ 4ನೇ ಪ್ರಕರಣದ (4)ನೇ ಉಪ-ಪ್ರಕರಣದ (ಎ) ಖಂಡದ (ಎ) ಮತ್ತು (ಬಿ) ಉಪಖಂಡಗಳ ಪ್ರಕಾರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿಯು, ಇತರರೊಂದಿಗೆ, ಸಾರ್ವಜನಿಕ ಶಿಕ್ಷಣ ಇಲಾಖೆಯ ಇಬ್ಬರು ವಿಭಾಗೀಯ ಉಪ-ನಿರ್ದೇಶಕರುಗಳನ್ನು ಹಾಗೂ ಒಬ್ಬ ಜಿಲ್ಲಾ ಶಿಕ್ಷಣಾಧಿಕಾರಿಯನ್ನು ಒಳಗೊಂಡಿರತಕ್ಕದ್ದು. 1970 ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯನ್ನು ಪುನರ್ ಸಂಘಟಿಸಿದ ನಂತರ ಪ್ರತಿಯೊಂದು ರೆವಿನ್ಯೂ ಜಿಲ್ಲೆಯು ಜಿಲ್ಲಾ ಶಿಕ್ಷಣಾಧಿಕಾರಿಯ ಬದಲಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ-ನಿರ್ದೇಶಕರ ದರ್ಜೆಯ ಒಬ್ಬ ಅಧಿಕಾರಿಯನ್ನು ಒಳಗೊಂಡಿದೆ. ಅದೇ ರೀತಿ ರೆವಿನ್ಯೂ ವಿಭಾಗಕ್ಕೆ ಸಂವಾದಿಯಾಗಿ ಪ್ರತಿಯೊಂದು ವಿಭಾಗವು ಸಾರ್ವಜನಿಕ ಶಿಕ್ಷಣ ಇಲಾಖೆಯ ವಿಭಾಗೀಯ ಉಪ-ನಿರ್ದೇಶಕರ ಬದಲಾಗಿ ಒಬ್ಬ ಜಂಟಿನಿರ್ದೇಶಕರು ಮುಖ್ಯಸ್ಥರಾಗಿರುತ್ತಾರೆ. ಮೇಲೆ ಉಲ್ಲೇಖಿಸಿದ ಇಬ್ಬರು ಅಧಿಕಾರಿಗಳ ಹುದ್ದೆಗಳಿಗೆ ಸಂಬಂಧಿಸಿದಂತೆ ಮಾಡಲಾದ ಬದಲಾವಣೆಯಗಳ ದೃಷ್ಟಿಯಿಂದ ಈ ಅಧಿನಿಯಮದಲ್ಲಿ ಕೆಲವು ಪ್ರಾಸಂಗಿಕ ತಿದ್ದುಪಡಿಗಳನ್ನು ತರುವುದು ಅವಶ್ಯವೆನಿಸಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV-2ಎ, ದಿನಾಂಕ: 17.06.1977ರ ಸಂಖ್ಯೆ: 490 ರಲ್ಲಿ ಪ್ರಕಟಿಸಲಾಗಿದೆ).

## IV

**1995ರ ತಿದ್ದುಪಡಿ ಅಧಿನಿಯಮ 1.–** ವಿದ್ಯಾರ್ಥಿಗಳ ಮಾನಸಿಕ ಮತ್ತು ದೈಹಿಕ ಸಾಮರ್ಥ್ಯಗಳು ಸುಸಂಗತವಾಗಿ ಹೆಚ್ಚುವಂತೆ ಮಾಡಲು ಮತ್ತು ಅವರು ಶಿಕ್ಷಣದ ಮೂಲಕ ವೈಜ್ಞಾನಿಕ ಹಾಗೂ ಜಾತ್ಯಾತೀತ ಮನೋಭಾವವನ್ನು ಬೆಳೆಸಿಕೊಳ್ಳುವಂತೆ ಮಾಡಲು ಶಿಕ್ಷಣ ಸಂಸ್ಥೆಗಳ ಯೋಜಿತ ಅಭಿವೃದ್ಧಿ, ಆರೋಗ್ಯಕರ ಶಿಕ್ಷಣ ಪದ್ಧತಿಗೆ ಪ್ರಾಧಾನ್ಯತೆ, ಶಿಕ್ಷಣದಲ್ಲಿ ಗುಣಮಟ್ಟ ಕಾಪಾಡುವಿಕೆ ಮತ್ತು ಅದರಲ್ಲಿ ಸುಧಾರಣೆ ಮತ್ತು ರಾಜ್ಯದಲ್ಲಿ ಶಿಕ್ಷಣ ಸಂಸ್ಥೆಗಳ ಉತ್ತಮ ಸಂಘಟನೆ, ಶಿಸ್ತು ಮತ್ತು ಅವುಗಳ ಮೇಲೆ ನಿಯಂತ್ರಣ – ಇವುಗಳ ಬಗ್ಗೆ ಉಪಬಂಧ ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV–2ಎ, ದಿನಾಂಕ: 07.07.1983ರ ಪುಟ 291 ರಲ್ಲಿ ಪ್ರಕಟಿಸಲಾಗಿದೆ).

## V

**1995ರ ತಿದ್ದುಪಡಿ ಅಧಿನಿಯಮ 18.–** ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ ಅಧಿನಿಯಮ, 1966ರ 20ನೇ ಪ್ರಕರಣದ (2)ನೇ ಉಪ–ಪ್ರಕರಣವು, ಮಂಡಲಿಯ ಅಧ್ಯಕ್ಷ, ಕಾರ್ಯದರ್ಶಿ ಮತ್ತು ಇತರ ಅಧಿಕಾರಿಗಳು ಹಾಗೂ ನೌಕರರ ಸಂಬಳ, ನಿವೃತ್ತಿ ವೇತನ, ರಜೆ ಮತ್ತು ಇತರ ಭತ್ಯೆಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂಥ ಮೊತ್ತವನ್ನು ಮಂಡಲಿಯು, ಮಂಡಲಿಯ ನಿಧಿಯಿಂದ ಪ್ರತಿ ವರ್ಷ ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡಲು ಅವಕಾಶ ಕಲ್ಪಿಸುತ್ತದೆ. ಆದಾಗ್ಯೂ, ಮಂಡಲಿಯ ಅಧ್ಯಕ್ಷ, ಕಾರ್ಯದರ್ಶಿ, ಇತರ ಅಧಿಕಾರಿಗಳು ಮತ್ತು ನೌಕರರು ಸರ್ಕಾರದ ನೌಕರರಾಗಿರುವುದರಿಂದ ಮತ್ತು ಅವರು ತಮ್ಮ ವೇತನ ಮತ್ತು ಭತ್ಯೆಗಳನ್ನು ರಾಜ್ಯದ ಸಂಚಿತ ನಿಧಿಯಿಂದ ಪಡೆಯುವುದರಿಂದ, ಸದರಿ ಉಪಬಂಧವನ್ನು ಬಿಟ್ಟುಬಿಡಲು ಉದ್ದೇಶಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV–2ಎ, ದಿನಾಂಕ: 17.04.1995ರ ಸಂಖ್ಯೆ 464 ರಲ್ಲಿ ಪ್ರಕಟಿಸಲಾಗಿದೆ).

## VI

**2003ರ ಅಧಿನಿಯಮ ಸಂಖ್ಯೆ 13.–** ಕರ್ನಾಟಕ ಅಧಿನಿಯಮಗಳ ಇಂದಿನವರೆಗೆ ಇರುವಂತೆ ಸಂಹಿತೆಗಳ ಸಂಪುಟಗಳನ್ನು ಸಿದ್ಧಪಡಿಸುವುದು ಮತ್ತು ಪ್ರಯೋಜನ ಅವಧಿ ಪೂರೈಸಿರುವ ಎಲ್ಲ ಅಧಿನಿಯಮಗಳನ್ನು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಅಧಿನಿಯಮಗಳನ್ನು ನಿರಸನಗೊಳಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಮೇಲಿನ ಉದ್ದೇಶಕ್ಕಾಗಿ ಸರ್ಕಾರವು ಏಕ ಸದಸ್ಯ ಸಮಿತಿಯೊಂದನ್ನು ರಚಿಸಿದೆ. ಈ ಸಮಿತಿಯು 1.11.1956 ರಿಂದ 31.12.2000ದವರೆಗಿನ ಕರ್ನಾಟಕ ಅಧಿನಿಯಮಗಳನ್ನು ಪರಿಶೀಲಿಸಿ, ಈ ಮುಂದಿನ ಅಧಿನಿಯಮಗಳನ್ನು ನಿರಸನಗೊಳಿಸುವುದಕ್ಕಾಗಿ "ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕ, 2002" ಎಂಬ ಈ ವಿಧೇಯಕವನ್ನು ಪ್ರಸ್ತಾಪಿಸಿದೆ.

ಈ ವಿಧೇಯಕವು, ಅವಶ್ಯಕವೆಂದು ಭಾವಿಸಲಾದ ಕೆಲವು ಅಧಿನಿಯಮಗಳ ತಿದ್ದುಪಡಿಗಳನ್ನೂ ಸಹ ಒಳಗೊಂಡಿರುತ್ತದೆ.

ಆದ್ದರಿಂದ ಈ ವಿಧೇಯಕ.

(2002ರ ಕರ್ನಾಟಕ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ: 4 ರಿಂದ ಪಡೆಯಲಾಗಿದೆ).

**VII**

**2003ರ ತಿದ್ದುಪಡಿ ಅಧಿನಿಯಮ ಸಂಖ್ಯೆ 14.–** ಸಂಯುಕ್ತ ಕಿರಿಯ ಕಾಲೇಜನ್ನು ಮಾನ್ಯತೆ ಪಡೆದ ಪ್ರೌಢ ಶಾಲೆಯ ಅರ್ಥವ್ಯಾಪ್ತಿಯಲ್ಲಿ ಸೇರಿಸಲು ಮತ್ತು ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಅಥವಾ ಅವರ ನಾಮನಿರ್ದೇಶಿತ; ನಿರ್ದೇಶಕರು ಡಿ.ಎಸ್.ಇ.ಆರ್.ಟಿ; ನಿರ್ದೇಶಕರು, ಪ್ರೌಢ ಶಿಕ್ಷಣ ಮತ್ತು ಇತರ ಪರೀಕ್ಷೆಗಳ ಮಂಡಲಿಯ ಪ್ರಭಾರದಲ್ಲಿರುವ ನಿರ್ದೇಶಕರನ್ನು ಮಂಡಲಿಯ ಪದನಿಮಿತ್ತ ಸದಸ್ಯರನ್ನಾಗಿ ಸೇರಿಸಲು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಲಿ ಅಧಿನಿಯಮ, 1966ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2002ರ ಕರ್ನಾಟಕ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ 8 ರಿಂದ ಪಡೆಯಲಾಗಿದೆ).

* * * *

# 1966ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ 16

(1966ರ ಮೇ 5ನೇ ದಿನಾಂಕದಂದು [1][ಕರ್ನಾಟಕ][1] ರಾಜ್ಯಪತ್ರದಲ್ಲಿ ಮೊದಲು ಪ್ರಕಟಿತವಾಗಿದೆ.)

## [1][ಕರ್ನಾಟಕ][1] ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ ಅಧಿನಿಯಮ, 1966

(1966ರ ಏಪ್ರಿಲ್ 27ನೇ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು.)

(1976ರ 9, 1977ರ 19, 1995ರ 1, 2002ರ 13 ಮತ್ತು 2003ರ 14ರ ಮೂಲಕ ತಿದ್ದುಪಡಿಯಾದಂತೆ.)

**[1][ಕರ್ನಾಟಕ ರಾಜ್ಯ][1] ಕ್ಕಾಗಿ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿಯನ್ನು ಸ್ಥಾಪಿಸಲು ಉಪಬಂಧಿಸುವ ಅಧಿನಿಯಮ.**

ಕೆಲವು ಸಾರ್ವತ್ರಿಕ ಪರೀಕ್ಷೆಗಳನ್ನು ನಡೆಸುವ ಮತ್ತು ನಿರ್ವಹಿಸುವ ಉದ್ದೇಶಕ್ಕಾಗಿ ಒಂದು ಮಂಡಲಿಯನ್ನು ಸ್ಥಾಪಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹದಿನೇಳನೇ ವರ್ಷದಲ್ಲಿ [1][ಕರ್ನಾಟಕ][1] ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು [1][ಕರ್ನಾಟಕ][1] ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ ಅಧಿನಿಯಮ, 1966 ಎಂದು ಕರೆಯತಕ್ಕದ್ದು.

(2) ಇದು ಇಡೀ [1][ಕರ್ನಾಟಕ ರಾಜ್ಯ][1] ಕ್ಕೆ ವ್ಯಾಪ್ತವಾಗುತ್ತದೆ.

(3) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [2][ದಿನಾಂಕ][2] ದಂದು ಜಾರಿಗೆ ಬರತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
2. ಈ ಅಧಿನಿಯಮವು 5ನೇ ಅಕ್ಟೋಬರ್ 1966ರಂದು ಅಧಿಸೂಚನೆಯ ಮೂಲಕ ಜಾರಿಗೆ ಬಂದಿದೆ. (ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯ ಭಾಗದಲ್ಲಿದೆ)

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಮಂಡಲಿ" ಎಂದರೆ ಈ ಅಧಿನಿಯಮದ ಅಡಿಯಲ್ಲಿ ರಚಿಸಿದ [1][ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ;][1]

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಬಿ) "ಉಪವಿಧಿಗಳು" ಎಂದರೆ ಈ ಅಧಿನಿಯಮದ ಅಡಿಯಲ್ಲಿ ಮಂಡಲಿಯು ರಚಿಸಿದ ಉಪವಿಧಿಗಳು;

(ಸಿ) "ಅಧ್ಯಕ್ಷ" ಎಂದರೆ ಮಂಡಲಿಯ ಅಧ್ಯಕ್ಷರು;

(ಡಿ) "ಸಮಿತಿ" ಎಂದರೆ ಈ ಅಧಿನಿಯಮದ ಮೇರೆಗೆ ನೇಮಿಸಲಾದ ಸಮಿತಿ;

[1][(ಡಿಎ) "ನಿರ್ದೇಶಕ" ಎಂದರೆ ಮಂಡಲಿಯ ನಿರ್ದೇಶಕರು;][1]

1. 1995ರ ಅಧಿನಿಯಮ ಸಂಖ್ಯೆ 1ರ ಮೂಲಕ 1-6-1995ರಿಂದ ಜಾರಿಗೆ ಬರುವಂತೆ ಅಧಿಸೂಚನೆಯ ಮೂಲಕ ಸೇರಿಸಲಾಗಿದೆ. (ಅಧಿಸೂಚನೆ ಪಾಠವು ಅಧಿನಿಯಮದ ಕೊನೆಯ ಭಾಗದಲ್ಲಿದೆ)

(ಇ) "ಪರೀಕ್ಷೆ" ಎಂದರೆ ಮಂಡಲಿಯು ನಡೆಸುವ ಪರೀಕ್ಷೆ;

(ಎಫ್) "ಪರೀಕ್ಷಕ" ಎಂಬುದು ಮುಖ್ಯ ಪರೀಕ್ಷಕ, ಜಂಟಿ ಮುಖ್ಯ ಪರೀಕ್ಷಕ, ಉಪ ಮುಖ್ಯ ಪರೀಕ್ಷಕ ಮತ್ತು ಪ್ರಶ್ನೆಪತ್ರಿಕೆಯನ್ನು ಸಿದ್ಧಪಡಿಸುವವನನ್ನು ಒಳಗೊಳ್ಳುತ್ತದೆ;

(ಜಿ) "ಮುಖ್ಯೋಪಾಧ್ಯಾಯ" ಅಥವಾ 'ಮುಖ್ಯೋಪಾಧ್ಯಾಯಿನಿ' ಎಂದರೆ, ಅವರನ್ನು ಯಾವ ಹೆಸರಿನಿಂದಲಾದರೂ ಕರೆಯಲಿ, ಮನ್ನಣೆ ಪಡೆದ ಪ್ರೌಢಶಾಲೆಯ ಬೋಧಕ ಸಿಬ್ಬಂದಿಯ ಮುಖ್ಯಸ್ಥರು;

(ಎಚ್) "ಅಧಿಸೂಚನೆ" ಎಂದರೆ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ;

(ಐ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಜೆ) "ಮನ್ನಣೆ ಪಡೆದ ಪ್ರೌಢಶಾಲೆ" ಎಂದರೆ ಕರ್ನಾಟಕದ [1][ಸಾರ್ವಜನಿಕ ಶಿಕ್ಷಣ ನಿರ್ದೇಶಕ][1] ರಿಂದ ಅಥವಾ ಈ ಬಗ್ಗೆ ಅವರು ಅಧಿಕೃತಗೊಳಿಸಿದ ಅಧಿಕಾರಿಯಿಂದ ಮನ್ನಣೆ ಪಡೆದ ಪ್ರೌಢಶಾಲೆ, ಉನ್ನತ ಪ್ರೌಢಶಿಕ್ಷಣಶಾಲೆ [2][ಸಂಯುಕ್ತ ಕಿರಿಯ ಕಾಲೇಜು][2] ವಿವಿಧೋದ್ದೇಶ ಪ್ರೌಢಶಾಲೆ ಅಥವಾ ಕಿರಿಯ ತಾಂತ್ರಿಕ ಶಾಲೆ;

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

2. 2003ರ ಅಧಿನಿಯಮ ಸಂಖ್ಯೆ 14ರ ಮೂಲಕ 3-4-2003ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಕೆ) "ವಿನಿಯಮಗಳು" ಎಂದರೆ ಈ ಅಧಿನಿಯಮದ ಮೇರೆಗೆ ಮಂಡಲಿಯು ರಚಿಸಿದ ವಿನಿಯಮಗಳು;

(ಎಲ್) "ನಿಯಮಗಳು" ಎಂದರೆ ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ನಿಯಮಗಳು;

(ಎಂ) "ಕಾರ್ಯದರ್ಶಿ" ಎಂದರೆ ಮಂಡಲಿಯ ಕಾರ್ಯದರ್ಶಿ;

(ಎನ್) "ಮೇಲ್ವಿಚಾರಕ" (ಸೂಪರ್‌ವೈಸರ್) ಎಂಬುದು ಮುಖ್ಯ ಅಧೀಕ್ಷಕ (ಚೀಫ್ ಸೂಪರಿಂಟೆಂಡೆಂಟ್), ಬ್ಲಾಕ್ ಅಧೀಕ್ಷಕ (ಬ್ಲಾಕ್ ಸೂಪರಿಂಟೆಂಡೆಂಟ್), ಸಹಾಯಕ ಅಧೀಕ್ಷಕ (ಅಸಿಸ್ಟಂಟ್ ಸೂಪರಿಂಟೆಂಡೆಂಟ್), ಕೊಠಡಿ ಅಧೀಕ್ಷಕ (ರೂಂ ಸೂಪರಿಂಟೆಂಡೆಂಟ್) ಮತ್ತು ಅಭಿರಕ್ಷಕ (ಕಸ್ಟೋಡಿಯನ್) ಇವರನ್ನು ಒಳಗೊಳ್ಳುತ್ತದೆ;

(ಓ) "ಉಪಾಧ್ಯಕ್ಷ" ಎಂದರೆ ಮಂಡಲಿಯ ಉಪಾಧ್ಯಕ್ಷ.

**3. ಮಂಡಲಿಯ ನಿಗಮನ.–** (1) ರಾಜ್ಯ ಸರ್ಕಾರವು, ಆದಷ್ಟು ಬೇಗನೆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಅಧಿಸೂಚನೆಯ ಮೂಲಕ, ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿಯನ್ನು ಸ್ಥಾಪಿಸತಕ್ಕದ್ದು.

(2) ಮಂಡಲಿಯು, [1][ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ][1] ಎಂಬ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಇದು ಶಾಶ್ವತವಾದ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು ಮತ್ತು ನಿಗಮಿತದ ಹೆಸರಿನಿಂದ ದಾವೆ ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು ಮತ್ತು ಇದು ಚರ ಮತ್ತು ಸ್ಥಿರ ಸ್ವತ್ತನ್ನು ಆರ್ಜಿಸಲು ಮತ್ತು ಧಾರಣ ಮಾಡಲು ಮತ್ತು ನಿಯಮಿಸಬಹುದಾದಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೊಳಪಟ್ಟು ಅದರಲ್ಲಿ

ನಿಹಿತವಾಗಿರಬಹುದಾದಂಥ ಅಥವಾ ಅದು ಆರ್ಜಿಸಿರಬಹುದಾದಂಥ ಚರ ಅಥವಾ ಸ್ಥಿರ ಸ್ವತ್ತನ್ನು ಗುತ್ತಿಗೆಗೆ ಕೊಡಲು, ಮಾರಾಟ ಮಾಡಲು ಅಥವಾ ಅನ್ಯಥಾ ವರ್ಗಾಯಿಸಲು ಮತ್ತು ಕರಾರು ಮಾಡಿಕೊಳ್ಳಲು ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಅವಶ್ಯವಾದ ಎಲ್ಲಾ ಕಾರ್ಯಗಳನ್ನು ಮಾಡಲು ಸಕ್ಷಮವಾಗಿರತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**4. ಮಂಡಲಿಯ ರಚನೆ.–** (1) ಮಂಡಲಿಯು ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರನ್ನು ಒಳಗೊಂಡಿರತಕ್ಕದ್ದು. [1][ಸಾರ್ವಜನಿಕ ಶಿಕ್ಷಣದ ಕಮೀಷನರು ಮಂಡಳಿಯ ಪದನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು.][1]

1. 1995ರ ಅಧಿನಿಯಮ ಸಂಖ್ಯೆ 1ರ ಮೂಲಕ 1-6-1995ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) [1][ನಿರ್ದೇಶಕನು][1] , ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನೇಮಕ ಮಾಡಿದ [1][ಹೆಚ್ಚುವರಿ ನಿರ್ದೇಶಕನ][1] ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಒಬ್ಬ ಅಧಿಕಾರಿಯಾಗಿರತಕ್ಕದ್ದು. ಅವನು ಮಂಡಲಿಯ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು ಮತ್ತು ಅವನು ರಾಜ್ಯ ಸರ್ಕಾರದ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು.

(3) [1][ನಿರ್ದೇಶಕನು][1] ಪದನಿಮಿತ್ತ ಉಪಾಧ್ಯಕ್ಷನಾಗಿರತಕ್ಕದ್ದು.

1. 1995ರ ಅಧಿನಿಯಮ ಸಂಖ್ಯೆ 1ರ ಮೂಲಕ 1-6-1995ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(4) ಮಂಡಲಿಯು ಈ ಕೆಳಕಂಡ ಸದಸ್ಯರನ್ನು ಸಹ ಒಳಗೊಂಡಿರತಕ್ಕದ್ದು:–

**(ಎ) ಪದನಿಮಿತ್ತ ಸದಸ್ಯರು:**

(ಎ) [1][ಮಂಡಳಿಯ ಸಾರ್ವಜನಿಕ ಶಿಕ್ಷಣದ ವಿಭಾಗೀಯ ಕಾರ್ಯದರ್ಶಿಗಳು ಮತ್ತು ಪದನಿಮಿತ್ತ ಜಂಟಿ ನಿರ್ದೇಶಕರುಗಳು;][1]

1. 2003ರ ಅಧಿನಿಯಮ ಸಂಖ್ಯೆ 14ರ ಮೂಲಕ 3-4-2003ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಬಿ) ರಾಜ್ಯ ಸರ್ಕಾರವು ಹೆಸರಿಸಿದ [1][ಸಾರ್ವಜನಿಕ ಶಿಕ್ಷಣದ ಉಪ ನಿರ್ದೇಶಕ;][1]

1. 1977ರ ಅಧಿನಿಯಮ ಸಂಖ್ಯೆ 19 ಮೂಲಕ 28-7-1977ರಿಂದ ಜಾರಿಗೆ ಬರುವಂತೆ ಪ್ರತಿನಿಯೋಜಿಸಲಾಗಿದೆ.

(ಸಿ) ರಾಜ್ಯ ಸರ್ಕಾರವು ಹೆಸರಿಸಿದ ತಾಂತ್ರಿಕ ಶಿಕ್ಷಣ ಇಲಾಖೆಯ ಒಬ್ಬ ಅಧಿಕಾರಿ;

(ಡಿ) ರಾಜ್ಯ ಸರ್ಕಾರವು ಹೆಸರಿಸಿದ ಕೃಷಿ ಇಲಾಖೆಯ ಒಬ್ಬ ಅಧಿಕಾರಿ;

[1][(ಡಿಎ) ಪಠ್ಯಪುಸ್ತಕಗಳ ನಿರ್ದೇಶಕ ಅಥವಾ ಅವನ ನಾಮನಿರ್ದೇಶಕ;][1]

1. 1995ರ ಅಧಿನಿಯಮ ಸಂಖ್ಯೆ 1ರ ಮೂಲಕ 1-6-1995ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಡಿಬಿ) ನಿರ್ದೇಶಕ, ಪದವಿ ಪೂರ್ವ ಶಿಕ್ಷಣ ಅಥವಾ ಅವನ ನಾಮ ನಿರ್ದೇಶಿತ;

(ಡಿಸಿ) ನಿರ್ದೇಶಕ, ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ;

(ಡಿಡಿ) ನಿರ್ದೇಶಕ, ಪ್ರೌಢಶಿಕ್ಷಣ;

(ಡಿಇ)  ಇತರ ಪರೀಕ್ಷೆಗಳ ಮಂಡಳಿಯ ಪ್ರಭಾರದಲ್ಲಿರುವ ನಿರ್ದೇಶಕ;][1]

1. 2003ರ ಅಧಿನಿಯಮ ಸಂಖ್ಯೆ 14ರ ಮೂಲಕ 3-4-2003ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಇ) ರಾಜ್ಯ ಸರ್ಕಾರವು ಹೆಸರಿಸಿದ ವಾಣಿಜ್ಯ ಶಿಕ್ಷಣ, ಗೃಹವಿಜ್ಞಾನ, ಶಿಕ್ಷಣ, ಕಲೆ ಮತ್ತು ಕುಶಲಕಲೆ, ಸಂಗೀತ, ನಾಟಕ ಮತ್ತು ನೃತ್ಯ, ಹಿಂದಿ ಶಿಕ್ಷಣ, ಸಂಸ್ಕೃತ ಶಿಕ್ಷಣ, [1][ರಾಜ್ಯ ಶಿಕ್ಷಣ ಘಟಕ][1] ಮತ್ತು ದೈಹಿಕ-ಶಿಕ್ಷಣ ಇವುಗಳ ಪ್ರಭಾರದಲ್ಲಿರುವ ಸಾರ್ವಜನಿಕ ಶಿಕ್ಷಣ ಇಲಾಖೆಯ [2][ಎಂಟು][2] ಮಂದಿ ಅಧಿಕಾರಿಗಳು.

1. 1995ರ ಅಧಿನಿಯಮ ಸಂಖ್ಯೆ 1ರ ಮೂಲಕ 1-6-1995ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1995ರ ಅಧಿನಿಯಮ ಸಂಖ್ಯೆ 1ರ ಮೂಲಕ 1-6-1995ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**(ಬಿ) ಚುನಾಯಿತ ಸದಸ್ಯರು:**

ರಾಜ್ಯದಲ್ಲಿ ಕಾನೂನು ಮೂಲಕ ಸ್ಥಾಪಿಸಿದ ಪ್ರತಿಯೊಂದು ವಿಶ್ವವಿದ್ಯಾನಿಯಲಯದ ಅಕೆಡೆಮಿಕ್ ಕೌನ್ಸಿಲ್‌ಗಳ ಸದಸ್ಯರು ತಮ್ಮ ಪೈಕಿ ನಿಯಮಿಸಿದ ರೀತಿಯಲ್ಲಿ ಚುನಾಯಿಸಿದ ಇಬ್ಬರು ಸದಸ್ಯರು.

**(ಸಿ) ನಾಮನಿರ್ದೇಶಿತ ಸದಸ್ಯರು:**

(ಎ) ಮನ್ನಣೆ ಪಡೆದ ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರು ಮತ್ತು ಮುಖ್ಯೋಪಾಧ್ಯಾಯಿನಿಯರ ಪೈಕಿ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಐವರು ಸದಸ್ಯರು;

(ಬಿ) ಮನ್ನಣೆ ಪಡೆದ ಪ್ರೌಢ ಶಾಲೆಗಳಲ್ಲಿ ಶಿಕ್ಷಕರಾಗಿ ಹತ್ತು ವರ್ಷಗಳಿಗೆ ಕಡಿಮೆ ಇಲ್ಲದಷ್ಟು ಸೇವೆ ಸಲ್ಲಿಸಿರುವ ಶಿಕ್ಷಕರ ಪೈಕಿ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಐವರು ಸದಸ್ಯರು;

(ಸಿ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ರಾಜ್ಯದಲ್ಲಿನ ಪ್ರೌಢಶಾಲಾ ಶಿಕ್ಷಕರ ತರಬೇತಿ ಕಾಲೇಜುಗಳ ಪ್ರಾಂಶುಪಾಲರಲ್ಲಿ ಒಬ್ಬರು;

(ಡಿ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ರಾಜ್ಯದಲ್ಲಿನ ಪ್ರಾಥಮಿಕ ಶಿಕ್ಷಕರ ತರಬೇತಿ ಕಾಲೇಜುಗಳ ಮುಖ್ಯಸ್ಥರಲ್ಲಿ ಇಬ್ಬರು;

(ಇ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ, ಪ್ರೌಢ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಅನುಭವ ಹೊಂದಿರುವ (ಮನ್ನಣೆ ಪಡೆದ ಪ್ರೌಢಶಾಲೆಗಳಲ್ಲಿ ಮುಖ್ಯೋಪಾಧ್ಯಾಯರು, ಮುಖ್ಯೋಪಾಧ್ಯಾಯನಿಯರು ಅಥವಾ ಶಿಕ್ಷಕರಾಗಿಲ್ಲದವರು) ಆರು ವ್ಯಕ್ತಿಗಳು:

ಪರಂತು, ಸದಸ್ಯನು,-

(i) ಅವನು (ಬಿ) ಪ್ಯಾರಾದ ಅಡಿಯಲ್ಲಿ ಚುನಾಯಿತನಾಗಿದ್ದರೆ ಮತ್ತು ಸಂಬಂಧಪಟ್ಟ ಅಕೆಡೆಮಿಕ್ ಕೌನ್ಸಿಲ್‌ನ ಸದಸ್ಯನಾಗಿರುವುದು ನಿಂತುಹೋಗಿದ್ದರೆ;

(ii) (ಸಿ) ಪ್ಯಾರಾದ (ಎ) ಖಂಡದ ಮೇರೆಗೆ ಅಥವಾ (ಬಿ) ಖಂಡದ ಮೇರೆಗೆ ಅವನು ನಾಮನಿರ್ದೇಶಿತನಾಗಿದ್ದು, ಸಂದರ್ಭಾನುಸಾರ ಮನ್ನಣೆ ಪಡೆದ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿರುವುದು ಅಥವಾ ಮುಖ್ಯೋಪಾಧ್ಯಾಯನಿಯಾಗಿರುವುದು ಅಥವಾ ಶಿಕ್ಷಕನಾಗಿರುವುದು ನಿಂತುಹೋಗಿದ್ದರೆ; ಮತ್ತು

(iii) (ಸಿ) ಪ್ಯಾರಾದ (ಸಿ) ಖಂಡದ ಮೇರೆಗೆ ಅಥವಾ (ಡಿ) ಖಂಡದ ಮೇರೆಗೆ ಅವನು ನಾಮನಿರ್ದೇಶಿತನಾಗಿದ್ದರೆ ಪ್ರೌಢಶಿಕ್ಷಕರತರಬೇತಿ ಕಾಲೇಜಿನ

ಪ್ರಾಂಶುಪಾಲರಾಗಿರುವುದು ಅಥವಾ ಪ್ರಾಥಮಿಕ ಶಾಲಾ ತರಬೇತಿ ಕಾಲೇಜಿನ ಮುಖ್ಯಸ್ಥನಾಗಿರುವುದು ನಿಂತುಹೋಗಿದ್ದರೆ

– ಹಾಗೆ ಸದಸ್ಯನಾಗಿ ಪದಧಾರಣ ಮಾಡುವುದು ನಿಂತುಹೋಗತಕ್ಕದ್ದು.

(5) (4)ನೇ ಉಪ-ಪ್ರಕರಣಕ್ಕೆ ಅನುಸಾರವಾಗಿ ಮಂಡಲಿಯ ಸದಸ್ಯರಾಗಿ ನಾಮನಿರ್ದೇಶಿತರಾದ ಅಥವಾ ಚುನಾಯಿತರಾದ ವ್ಯಕ್ತಿಗಳ ಹೆಸರುಗಳನ್ನು ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಪ್ರಕಟಿಸತಕ್ಕದ್ದು.

**5. ಸದಸ್ಯರ ಪದಾವಧಿ.–** ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಮಂಡಲಿಯ ಇತರ ಸದಸ್ಯರು, 4ನೇ ಪ್ರಕರಣದ (5)ನೇ ಉಪ-ಪ್ರಕರಣದ ಮೇರೆಗೆ ಅವರ ಹೆಸರನ್ನು ಪ್ರಕಟಿಸಿದ ದಿನಾಂಕದಿಂದ ಮೂರು ವರ್ಷಗಳ ಅವಧಿಗಾಗಿ ಪದಧಾರಣ ಮಾಡತಕ್ಕದ್ದು ಮತ್ತು ಅಂಥ ಅವಧಿಯು ಮುಕ್ತಾಯವಾದ ಮೇಲೆ ಅವರು ಮರುಚುನಾಯಿತರಾಗಲು ಅಥವಾ ಪುನಃ ನಾಮನಿರ್ದೇಶಿತರಾಗಲು ಅರ್ಹರಾಗಿರತಕ್ಕದ್ದು:

ಪರಂತು, ಹೊರಹೋಗುವ ಸದಸ್ಯರ ಪದಾವಧಿಯು, 4ನೇ ಪ್ರಕರಣದ (5)ನೇ ಉಪ-ಪ್ರಕರಣದ ಮೇರೆಗೆ, ಸಂದರ್ಭಾನುಸಾರ, ಚುನಾಯಿತರಾದ ಅಥವಾ ನಾಮನಿರ್ದೇಶಿತರಾದ ಅವರ ಉತ್ತರಾಧಿಕಾರಿಗಳ ಹೆಸರುಗಳನ್ನು ಪ್ರಕಟಿಸಿದ ದಿನಾಂಕದವರೆಗೆ ವಿಸ್ತೃತವಾಗುವುದಾಗಿ ಮತ್ತು ಅದರೊಂದಿಗೆ ಮುಕ್ತಾಯವಾಗುವುದೆಂದು ಭಾವಿಸತಕ್ಕದ್ದು.

**6. ಸದಸ್ಯರ ಅನರ್ಹತೆಗಳು.– ವ್ಯಕ್ತಿಯು,–**

(i) ಅವನು ಸ್ವತಃ ಅಥವಾ ಅವನ ಪಾಲುದಾರನ ಮೂಲಕ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಮಂಡಲಿಯ ಆದೇಶದ ಮೂಲಕ ಮಾಡಿದ ಯಾವುದೇ ಕೆಲಸದಲ್ಲಿ ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಯಾವುದೇ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ;

(ii) 23ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಯಾರ ವಿರುದ್ಧ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಯಾಗಿದ್ದರೆ

– ಈ ಅಧಿನಿಯಮದ ಮೇರೆಗೆ ಮಂಡಲಿಯ ಸದಸ್ಯನಾಗಿ ನೇಮಕವಾಗಲು ಅಥವಾ ಚುನಾಯಿತನಾಗಲು ಅಥವಾ ನಾಮನಿರ್ದೇಶಿತನಾಗಲು ಮತ್ತು ಸದಸ್ಯನಾಗಿರಲು ಅಥವಾ ಯಾವುದೇ ಸಮಿತಿಯ ಸದಸ್ಯನಾಗಿರಲು ಅನರ್ಹನಾಗತಕ್ಕದ್ದು:

ಪರಂತು, ಅಂಥ ವ್ಯಕ್ತಿಯು ನಿರ್ಲಕ್ಷತೆಯಿಂದಾಗಿ ತಪ್ಪಿತಸ್ಥನಾಗಿರುವನೆಂಬ ಕಾರಣದ ಮೇಲೆ ಆದೇಶವನ್ನು ಮಾಡಿರುವಲ್ಲಿ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದ ತರುವಾಯ ಆ ಅನರ್ಹತೆಯು ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು.

**7. ಕೊ-ಆಪ್ಟ್ ಮಾಡಿಕೊಂಡ ವ್ಯಕ್ತಿಗಳ ಅನರ್ಹತೆಗಳು.–** ವ್ಯಕ್ತಿಯು, ಅವನು 6ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಅನರ್ಹತೆಗೆ ಒಳಗಾಗಿದ್ದರೆ ಅಥವಾ ಒಳಪಟ್ಟರೆ 21ನೇ ಪ್ರಕರಣದ ಅಥವಾ 22ನೇ ಪ್ರಕರಣದ ಮೇರೆಗೆ ನೇಮಕಗೊಂಡ ಪರೀಕ್ಷಕರ ಸಮಿತಿಗೆ ಅಥವಾ ಯಾವುದೇ ಇತರ ಸಮಿತಿಗೆ ಕೊ-ಆಪ್ಟ್‌ನಾಗುವುದಕ್ಕಾಗಿ ಅಥವಾ ಕೋ-ಆಪ್ಟ್ ಆದ ತರುವಾಯ ಕಾರ್ಯನಿರ್ವಹಿಸುವುದನ್ನು ಮುಂದುವರಿಸುವುದಕ್ಕೆ ಅನರ್ಹನಾಗತಕ್ಕದ್ದು.

**8. ಅನರ್ಹತೆಗಳ ಕಾರಣದಿಂದ ಉಂಟಾಗುವ ಖಾಲಿಸ್ಥಾನ.–** ಮಂಡಲಿಯ ಅಥವಾ ಸಮಿತಿಯ ಯಾರೇ ಸದಸ್ಯನು, ಸಂದರ್ಭಾನುಸಾರ, ಅವನು ಯಾವ ಅವಧಿಗಾಗಿ ನೇಮಕಗೊಂಡಿರುವನೋ, ಚುನಾಯಿತನಾಗಿರುವನೋ ಅಥವಾ ನಾಮನಿರ್ದೇಶಿತನಾಗಿರುವನೋ ಆ ಅವಧಿಯಲ್ಲಿ, 6ನೇ ಪ್ರಕರಣದ ಅಥವಾ 7ನೇ ಪ್ರಕರಣದ ಅಡಿಯಲ್ಲಿ ಯಾವುದೇ ಅನರ್ಹತೆಗೆ ಒಳಗಾದರೆ ಅವನ ಪದವು ಆ ತರುವಾಯ ಖಾಲಿಯಾಗತಕ್ಕದ್ದು.

**9. ಗೈರುಹಾಜರಿಯ ಕಾರಣದಿಂದ ಉಂಟಾಗುವ ಖಾಲಿಸ್ಥಾನ.–** ಮಂಡಲಿಯ ಯಾರೇ ಸದಸ್ಯನು, ಅವನು ಯಾವ ಅವಧಿಗಾಗಿ ಚುನಾಯಿತನಾಗಿರುವನೋ ಅಥವಾ ನಾಮನಿರ್ದೇಶಿತನಾಗಿರುವನೋ ಆ ಅವಧಿಯಲ್ಲಿ ಮಂಡಲಿಯ ಅನುಮತಿಯಿಲ್ಲದೆ ಮಂಡಲಿಯ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ ಅವನ ಪದವು ಆ ತರುವಾಯ ಖಾಲಿಯಾಗತಕ್ಕದ್ದು.

**10. ಖಾಲಿಸ್ಥಾನವನ್ನು ಪ್ರಕಟಿಸುವುದು.–** 8ನೇ ಪ್ರಕರಣದ ಅಥವಾ 9ನೇ ಪ್ರಕರಣದ ಮೇರೆಗೆ ಯಾವುದೇ ಖಾಲಿಸ್ಥಾನವು ಉಂಟಾದರೆ ಅದನ್ನು ಮಂಡಲಿಯು ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು.

**11. ಸದಸ್ಯತ್ವದಿಂದ ತೆಗೆದುಹಾಕುವುದು.–** (1) ರಾಜ್ಯ ಸರ್ಕಾರವು, ಮಂಡಲಿಯ ಶಿಫಾರಸಿನ ಮೇಲೆ ಮಂಡಲಿಯ ಅಥವಾ ಸಮಿತಿಯ ಯಾರೇ ಸದಸ್ಯನನ್ನು, ಅವನನ್ನು ನೈತಿಕ ಪತನವನ್ನೊಳಗೊಳ್ಳುವ ಯಾವುದೇ ಅಪರಾಧದ ಬಗ್ಗೆ ನ್ಯಾಯಾಲಯವು ಅಪರಾಧಿ ಎಂದು ನಿರ್ಣಯಿಸಿದ್ದರೆ ಅಥವಾ ಅವನು ನಿಂದಾತ್ಮಕ ನಡತೆಯ ಬಗ್ಗೆ ತಪ್ಪಿತಸ್ಥನಾಗಿದ್ದರೆ ತೆಗೆದುಹಾಕಬಹುದು.

(2) ಯಾರೇ ಸದಸ್ಯನನ್ನು ತೆಗೆದುಹಾಕುವುದಕ್ಕಾಗಿ ಯಾವುದೇ ಶಿಫಾರಸನ್ನು ಸಂಬಂಧಪಟ್ಟ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ಹೊರತು ಮಾಡತಕ್ಕದ್ದಲ್ಲ.

(3) (1)ನೇ ಉಪಪ್ರಕರಣದ ಮೇರೆಗೆ ಮಂಡಲಿಯಿಂದ ಅಥವಾ ಸಮಿತಿಯಿಂದ ತೆಗೆದುಹಾಕಲಾಗಿರುವ ಯಾರೇ ಸದಸ್ಯನ ಹೆಸರನ್ನು ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು.

**12. ಮಂಡಲಿಯ ಸದಸ್ಯರ ರಾಜೀನಾಮೆ.–** ಪದನಿಮಿತ್ತ ಸದಸ್ಯನನ್ನು ಹೊರತುಪಡಿಸಿ, ಮಂಡಲಿಯ ಸದಸ್ಯನು, ಯಾವುದೇ ಕಾಲದಲ್ಲಿ ಅಧ್ಯಕ್ಷನಿಗೆ ಬರಹದಲ್ಲಿ ನೋಟೀಸನ್ನು ಕೊಡುವ ಮೂಲಕ ತನ್ನ ಸ್ಥಾನಕ್ಕೆ ರಾಜೀನಾಮೆ ಕೊಡಬಹುದು ಮತ್ತು ಅವನ ರಾಜೀನಾಮೆಯನ್ನು ಅಧ್ಯಕ್ಷನು ಸ್ವೀಕರಿಸಿದ ಕೂಡಲೇ ಅಂಥ ಸದಸ್ಯನು ತನ್ನ ಸ್ಥಾನವನ್ನು ಖಾಲಿ ಮಾಡಿರುವುದಾಗಿ ಭಾವಿಸತಕ್ಕದ್ದು.

**13. ಸಾಂದರ್ಭಿಕ ಖಾಲಿ ಸ್ಥಾನಗಳು.–** ಈ ಅಧಿನಿಯಮದ ಮೇರೆಗೆ ರಚಿಸಿದ ಮಂಡಲಿಯ ಅಥವಾ ಯಾವುದೇ ಸಮಿತಿಯ (ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ) ಸದಸ್ಯರ ಪೈಕಿ ಉಂಟಾದ ಎಲ್ಲಾ ಸಾಂದರ್ಭಿಕ ಖಾಲಿ ಸ್ಥಾನಗಳನ್ನು ಆದಷ್ಟು ಬೇಗನೆ, ಸಂದರ್ಭಾನುಸಾರ ಚುನಾವಣೆಯ ಮೂಲಕ, ನಾಮನಿರ್ದೇಶನದ ಮೂಲಕ ಅಥವಾ ನೇಮಕಾತಿಯ ಮೂಲಕ ಭರ್ತಿ ಮಾಡತಕ್ಕದ್ದು. ಸಾಂದರ್ಭಿಕ ಖಾಲಿಸ್ಥಾನಕ್ಕೆ ಚುನಾಯಿತನಾದ, ನಾಮನಿರ್ದೇಶಿತನಾದ ಅಥವಾ ನೇಮಕಗೊಂಡ ವ್ಯಕ್ತಿಯು, ಅವನು ಯಾರ ಸ್ಥಾನಕ್ಕೆ ಚುನಾಯಿತನಾಗಿರುವನೋ, ನಾಮನಿರ್ದೇಶಿತನಾಗಿರುವನೋ ಅಥವಾ ನೇಮಕಗೊಂಡಿರುವನೋ ಆ ಸ್ಥಾನವು ತೆರವಾಗದೆ ಇದ್ದಿದ್ದರೆ ಆ ಸದಸ್ಯನು ಎಲ್ಲಿಯವರೆಗೆ ಆ ಹುದ್ದೆಯನ್ನು ಧಾರಣ ಮಾಡುತ್ತಿದ್ದನೋ, ಆ ಅವಧಿಯವರೆಗೆ ಮಾತ್ರ ಹುದ್ದೆಯನ್ನು ಧಾರಣ ಮಾಡತಕ್ಕದ್ದು.

**14. ಮಂಡಲಿಯೊಂದಿಗೆ ವ್ಯಕ್ತಿಗಳ ತಾತ್ಕಾಲಿಕ ಸಂಯೋಜನೆ, ಇತ್ಯಾದಿ.–** (1) ಮಂಡಲಿಯು, ಈ ಅಧಿನಿಯಮದ ಮೇರೆಗೆ ಯಾವುದೇ ತನ್ನ ಪ್ರಕಾರ್ಯವನ್ನು ನೆರವೇರಿಸುವಲ್ಲಿ, ಯಾರ ಸಹಾಯ ಅಥವಾ ಸಲಹೆಯನ್ನು ಬಯಸಬಹುದೋ ಅಂಥ ಮೂರಕ್ಕೆ ಮೀರದ ಆ ವ್ಯಕ್ತಿಗಳನ್ನು ತನ್ನೊಂದಿಗೆ ಸಂಯೋಜಿಸಿಕೊಳ್ಳಬಹುದು.

(2) ಮಂಡಲಿಯು, ವಿಶೇಷ ಉದ್ದೇಶಗಳಿಗಾಗಿ ಪರೀಕ್ಷಕರ ಸಮಿತಿ ಅಥವಾ ಇತರ ಸಮಿತಿಗಳಿಗೆ ಪ್ರತಿಯೊಂದು ಸಂದರ್ಭದಲ್ಲಿ ಮೂವರನ್ನು ಮೀರದಷ್ಟು ವ್ಯಕ್ತಿಗಳನ್ನು ಕೋ-ಆಪ್ಟ್ ಮಾಡಿಕೊಳ್ಳಬಹುದು.

(3) (1)ನೇ ಉಪ-ಪ್ರಕರಣದ ಮೇರೆಗೆ ಸಂಯೋಜಿಸಿಕೊಳ್ಳಲಾದ ಅಥವಾ (2)ನೇ ಉಪ-ಪ್ರಕರಣದ ಮೇರೆಗೆ ಕೋ-ಆಪ್ಟ್ ಮಾಡಿಕೊಳ್ಳಲಾದ ವ್ಯಕ್ತಿಯನ್ನು ಸಂದರ್ಭಾನುಸಾರ ಮಂಡಲಿಯ ಅಥವಾ ಸಮಿತಿಯ ಸದಸ್ಯನೆಂಬುದಾಗಿ ಭಾವಿಸತಕ್ಕದ್ದಲ್ಲ ಮತ್ತು ಅವನಿಗೆ ಅದರ ಯಾವುದೇ ಸಭೆಯಲ್ಲಿ ಮತ ನೀಡುವ ಯಾವುದೇ ಹಕ್ಕು ಇರತಕ್ಕದ್ದಲ್ಲ. ಆದರೆ, ಯಾವ ಉದ್ದೇಶಕ್ಕಾಗಿ ಅವನನ್ನು ಸಂಯೋಜಿಸಿಕೊಳ್ಳಲಾಯಿತೋ ಅಥವಾ ಕೋ-ಆಪ್ಟ್ ಮಾಡಿಕೊಳ್ಳಲಾಯಿತೋ ಆ ಉದ್ದೇಶಕ್ಕೆ ಸಂಬಂಧಪಟ್ಟ ಮಂಡಲಿಯ ಅಥವಾ ಸಮಿತಿಯ ಚರ್ಚೆಗಳಲ್ಲಿ ಅವನು ಭಾಗವಹಿಸಬಹುದು.

**15. ಮಂಡಲಿಯ ಅಧಿಕಾರಗಳು ಮತ್ತು ಕರ್ತವ್ಯಗಳು.–** ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಮಂಡಲಿಯ ಅಧಿಕಾರಗಳು ಮತ್ತು ಕರ್ತವ್ಯಗಳು ಈ ಕೆಳಕಂಡಂತೆ ಇರತಕ್ಕದ್ದು, ಎಂದರೆ:-

(ಎ) (i) [1][ಕರ್ನಾಟಕ ಸೆಕೆಂಡರಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್ ಪರೀಕ್ಷೆ;][1]

(ii) ಟೀಚರ್ಸ್ ಸರ್ಟಿಫಿಕೇಟ್ ಪರೀಕ್ಷೆ (ಹೈಯರ್)ಯನ್ನು;

(iii) ಟೀಚರ್ಸ್ ಸರ್ಟಿಫಿಕೇಟ್ ಪರೀಕ್ಷೆ (ಲೋಯರ್)ಯನ್ನು;

(iv) ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಇತರ ಪರೀಕ್ಷೆಯನ್ನು

- ನಡೆಸುವುದು;

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಬಿ) 26ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ ಅಥವಾ ಆ ಪೈಕಿ ಯಾವುದೇ ವಿಷಯಕ್ಕಾಗಿ ವಿನಿಯಮಗಳನ್ನು ರಚಿಸುವುದು;

(ಸಿ) ಪರೀಕ್ಷೆಗಳಿಗಾಗಿ ಪ್ರವೇಶವನ್ನು ಕೋರುವ ಮತ್ತು ಅವುಗಳಿಗೆ ಹಾಜರಾಗುವ ವಿದ್ಯಾರ್ಥಿಗಳು ಮಾಡಿದ ದುರ್ವರ್ತನೆಯ ಕಾರ್ಯಗಳಿಗಾಗಿ ದಂಡನೆಗಳನ್ನು ವಿಧಿಸುವುದಕ್ಕೆ ವಿನಿಯಮಗಳನ್ನು ರಚಿಸುವುದು;

(ಡಿ) ಪರೀಕ್ಷಕರು ಮತ್ತು ಮೇಲ್ವಿಚಾರಕರನ್ನು ನೇಮಕ ಮಾಡುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು ಮತ್ತು ಪರೀಕ್ಷೆಗಳನ್ನು ನಡೆಸಲು ಮತ್ತು ಅವುಗಳ ಫಲಿತಾಂಶಗಳನ್ನು ಪ್ರಕಟಿಸಲು ವ್ಯವಸ್ಥೆ ಮಾಡುವುದು;

(ಇ) ವಿನಿಯಮಗಳ ಮೂಲಕ ನಿಯಮಿಸಬಹುದಾದಂಥ ಫೀಜುಗಳು ಮತ್ತು ಇತರ ಚಾರ್ಜುಗಳನ್ನು ನಿಗದಿಪಡಿಸುವುದು, ತಗಾದೆ ಮಾಡುವುದು ಮತ್ತು ಅವುಗಳನ್ನು ಸ್ವೀಕರಿಸುವುದು;

(ಎಫ್) ಪರೀಕ್ಷೆಗಳಲ್ಲಿ ಉತ್ತೀರ್ಣವಾಗುವ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ಕೊಡುವುದು;

(ಜಿ) ಇಚ್ಛಾಪತ್ರದ ಮೂಲಕ ಕೊಡುವುದನ್ನು, ದಾನಗಳನ್ನು, ದತ್ತಿಗಳನ್ನು, ನ್ಯಾಸಗಳನ್ನು ಮತ್ತು ಯಾವುದೇ ಸ್ವತ್ತಿನ ಅಥವಾ ಅದರಲ್ಲಿನ ಹಿತಾಸಕ್ತಿಯ ಅಥವಾ ಅದಕ್ಕಿರುವ ಹಕ್ಕಿನ ವರ್ಗಾವಣೆಯನ್ನು ಸ್ವೀಕರಿಸುವುದು;

(ಹೆಚ್) (ಜಿ) ಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ಸ್ವತ್ತು, ಹಿತಾಸಕ್ತಿ ಅಥವಾ ಹಕ್ಕನ್ನು ಧಾರಣ ಮಾಡುವುದು ಮತ್ತು ಅವುಗಳನ್ನು ನಿರ್ವಹಿಸುವುದು ಅಥವಾ ಅವುಗಳೊಂದಿಗೆ ವ್ಯವಹರಿಸುವುದು;

(ಐ) ರಾಜ್ಯ ಸರ್ಕಾರವು ಅನುಮೋದಿಸಬಹುದಾದಂಥ ಉದ್ದೇಶಗಳಿಗಾಗಿ ಭದ್ರತೆ ಸಹಿತ ಅಥವಾ ಭದ್ರತೆಯಿಲ್ಲದೆ ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಕೇಂದ್ರ ಸರ್ಕಾರದಿಂದ, ರಾಜ್ಯ ಸರ್ಕಾರದಿಂದ ಅಥವಾ ರಾಜ್ಯ ಸರ್ಕಾರವು ಅನುಮೋದಿಸಿದ ನಿಗಮಿತ ನಿಕಾಯಗಳಿಂದ ಹಣವನ್ನು ಸಾಲ ಪಡೆಯುವುದು;

(ಜೆ) ವೃತ್ತಿ ವೇತನಗಳು, ವಿದ್ಯಾರ್ಥಿ ವೇತನಗಳು, ಪದಕಗಳು, ಬಹುಮಾನಗಳು ಮತ್ತು ಇತರ ಪಾರಿತೋಷಕಗಳನ್ನು ಕೊಡುವುದು;

(ಕೆ) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅದಕ್ಕೆ ಪ್ರದಾನ ಮಾಡಬಹುದಾದ ಅಥವಾ ವಿಧಿಸಬಹುದಾದ ಅಥವಾ ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರವೇರಿಸುವುದು;

(ಎಲ್) ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸಲು ಅವಶ್ಯಕವಾಗಬಹುದಾದಂಥ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡುವುದು.

**16. ಮಂಡಲಿಯ ಸಭೆಗಳು.–** ಮಂಡಲಿಯು, ಸಾಮಾನ್ಯವಾಗಿ ಕನಿಷ್ಠ ಪಕ್ಷ ಪ್ರತಿ ಮೂರು ತಿಂಗಳಿಗೆ ಒಂದು ಸಾರಿ ಸಭೆ ಸೇರತಕ್ಕದ್ದು. ಅಧ್ಯಕ್ಷನು ಯಾವುದೇ ಕಾಲದಲ್ಲಿ ಮಂಡಲಿಯ ವಿಶೇಷ ಸಭೆಯನ್ನು ಕರೆಯಬಹುದು ಮತ್ತು ಮಂಡಲಿಯ ಸದಸ್ಯರ ಮೂರನೇ ಒಂದು ಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಸದಸ್ಯರು ಬರಹದಲ್ಲಿ ಕೋರಿಕೊಂಡರೆ ಮತ್ತು ಅಂಥ ಕೋರಿಕೆಯನ್ನು ಸ್ವೀಕರಿಸಿದ ತರುವಾಯ ಹತ್ತು ದಿವಸಗಳನ್ನು ಮೀರದ ಯಾವುದೇ ದಿನಾಂಕದಂದು ಅಂಥ ವಿಶೇಷ ಸಭೆಯನ್ನು ಕರೆಯತಕ್ಕದ್ದು.

**17. ಅಧ್ಯಕ್ಷನ ಅಧಿಕಾರಗಳು ಮತ್ತು ಕರ್ತವ್ಯಗಳು.–** (1) ಅಧ್ಯಕ್ಷನು, ಮಂಡಲಿಯ ಮತ್ತು ಮಂಡಲಿಯ ಎಲ್ಲಾ ಸಮಿತಿಗಳ ಸಭೆಗಳ ಅಧ್ಯಕ್ಷತೆ ವಹಿಸತಕ್ಕದ್ದು. ಮಂಡಲಿಯ ಮತ್ತು ಅದರ ಎಲ್ಲಾ ಸಮಿತಿಗಳ ಸಭೆಗಳನ್ನು ಕರೆಯಲು ಅವನಿಗೆ ಅಧಿಕಾರವಿರತಕ್ಕದ್ದು.

(2) [1][ನಿರ್ದೇಶಕನು][1] ಮಂಡಲಿಯ ಪ್ರಧಾನ ಕಾರ್ಯನಿರ್ವಾಹಕ ಅಧಿಕಾರಿಯಾಗಿರತಕ್ಕದ್ದು ಮತ್ತು ಅದರ ವ್ಯವಹಾರಗಳ ಮೇಲೆ ಅವನಿಗೆ ಸಾಮಾನ್ಯ ನಿಯಂತ್ರಣದ, ಮೇಲ್ವಿಚಾರಣೆ ಮಾಡುವ ಮತ್ತು ಪರಿಶೀಲಿಸುವ ಅಧಿಕಾರವಿರತಕ್ಕದ್ದು. ಈ ಅಧಿನಿಯಮದ, ನಿಯಮಗಳ, ವಿನಿಯಮಗಳ ಮತ್ತು ಉಪವಿಧಿಗಳ ಉಪಬಂಧಗಳನ್ನು ಕ್ರಮಬದ್ಧವಾಗಿ ಪಾಲಿಸುವುದನ್ನು ಖಚಿತಪಡಿಸಿಕೊಳ್ಳುವುದು ಅವನ ಕರ್ತವ್ಯವಾಗಿರತಕ್ಕದ್ದು ಮತ್ತು ಅವನು ಆ ಉದ್ದೇಶಕ್ಕಾಗಿ ಅವಶ್ಯಕವಾದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅವುಗಳನ್ನು ಚಲಾಯಿಸತಕ್ಕದ್ದು.

(3) [1][ನಿರ್ದೇಶಕನು][1] ಕೂಡಲೇ ಕ್ರಮವನ್ನು ಕೈಗೊಳ್ಳಬೇಕಾದಂಥ ತುರ್ತು ಸಂದರ್ಭ ಇದೆಯೆಂದು ಅಭಿಪ್ರಾಯ ಪಟ್ಟರೆ ಆ ಯಾವುದೇ ತುರ್ತು ಸಂದರ್ಭದ ಬಗ್ಗೆ ಕೂಡಲೇ ಕ್ರಮವನ್ನು ಕೈಗೊಳ್ಳಬಹುದು. ಅಂಥ ಸಂದರ್ಭದಲ್ಲಿ ಅವನು ಮತ್ತು ಆ ತರುವಾಯ ಆದಷ್ಟು ಬೇಗನೆ ಆ ವಿಷಯದ ಬಗ್ಗೆ ಸಾಮಾನ್ಯವಾಗಿ ವ್ಯವಹರಿಸುವ ಮಂಡಲಿಗೆ ಅಥವಾ ಸಮಿತಿಗೆ ತನ್ನ ಕ್ರಮದ ಬಗ್ಗೆ ವರದಿ ಮಾಡತಕ್ಕದ್ದು.

(4) (3)ನೇ ಉಪ-ಪ್ರಕರಣದ ಮೇರೆಗೆ ಕೈಗೊಂಡ ಯಾವುದೇ ಕ್ರಮಕ್ಕೆ ಸಂಬಂಧಿಸಿದಂತೆ [1][ನಿರ್ದೇಶಕನ][1] ಮತ್ತು ಮಂಡಲಿಯ ಅಥವಾ ಸಮಿತಿಯ ನಡುವೆ ಭಿನ್ನಾಭಿಪ್ರಾಯ ಉದ್ಭವಿಸಿದಲ್ಲಿ, [1][ನಿರ್ದೇಶಕನು][1] ಈ ವಿಷಯವನ್ನು [1][ಅಧ್ಯಕ್ಷನ][1] ಮೂಲಕ ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕದ್ದು ಮತ್ತು ಅದರ ಬಗ್ಗೆ ರಾಜ್ಯ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

1. 1995ರ ಅಧಿನಿಯಮ ಸಂಖ್ಯೆ 1ರ ಮೂಲಕ 1-6-1995ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(5) ಈ ಅಧಿನಿಯಮದ ಉಪಬಂಧಗಳಲ್ಲಿ, ನಿಯಮಗಳಲ್ಲಿ ಮತ್ತು ವಿನಿಯಮಗಳಲ್ಲಿ ಏನೇ ಇದ್ದರೂ, ಯಾವುದೇ ತುರ್ತು ಪರಿಸ್ಥಿತಿಯಲ್ಲಿ ಪರೀಕ್ಷೆಗಳ ದಿನಾಂಕ, ಕಾಲ, ಸ್ಥಳ ಮತ್ತು ಕ್ರಮದ ವಿಷಯದಲ್ಲಿ ಮತ್ತು ಮಂಡಲಿಯು ಪರೀಕ್ಷೆಗಳನ್ನು ನಿರ್ವಹಿಸುವುದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ಯಾವುದೇ ಪ್ರಕ್ರಿಯೆಯ ಬಗ್ಗೆ ವ್ಯವಹರಿಸುವ ಎಲ್ಲಾ ವಿಷಯಗಳಲ್ಲಿ ಸಾಮಾನ್ಯವಾಗಿ ಸದರಿ ಉಪಬಂಧಗಳ ಕಟ್ಟುನಿಟ್ಟಾದ ಪಾಲನೆಯನ್ನು ಬಿಟ್ಟುಬಿಡಲು ಅಧ್ಯಕ್ಷನು ಸಕ್ಷಮನಾಗಿರತಕ್ಕದ್ದು.

(6) ಅನಾರೋಗ್ಯದ ಅಥವಾ ಮಂಡಲಿಗೆ ಸಂಬಂಧಿಸಿದಂತೆ ಇತರ ಕರ್ತವ್ಯದಲ್ಲಿ ಪ್ರತಿನಿಯೋಜನೆ ಮೇಲಿರುವ ಕಾರಣದಿಂದಾಗಿ ರಜೆಯ ಮೇಲೆ ಇರುವಾಗ ಅಥವಾ ಯಾವುದೇ ರೀತಿಯಲ್ಲಿ ಉಂಟಾದ ಖಾಲಿಸ್ಥಾನವನ್ನು ಭರ್ತಿ ಮಾಡುವವರೆಗೆ ಅಧ್ಯಕ್ಷನ ಗೈರುಹಾಜರಿಯ ಅವಧಿಯಲ್ಲಿ ಅವನ ಕರ್ತವ್ಯಗಳನ್ನು ಉಪಾಧ್ಯಕ್ಷನು ನೆರವೇರಿಸತಕ್ಕದ್ದು ಮತ್ತು ಉಪಾಧ್ಯಕ್ಷನ ಗೈರುಹಾಜರಿಯಲ್ಲಿ ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ಸದಸ್ಯನು ಅವುಗಳನ್ನು ನೆರವೇರಿಸತಕ್ಕದ್ದು.

**18. ಕಾರ್ಯದರ್ಶಿಯ ನೇಮಕಾತಿ, ಅಧಿಕಾರಗಳು ಮತ್ತು ಕರ್ತವ್ಯಗಳು.-** (1) ಮಂಡಲಿಯು, ಒಬ್ಬ ಕಾರ್ಯದರ್ಶಿಯನ್ನು ಹೊಂದಿರತಕ್ಕದ್ದು. ಅವನು ರಾಜ್ಯ ಸರ್ಕಾರದಿಂದ ನೇಮಕಗೊಂಡ ಸಾರ್ವಜನಿಕ ಶಿಕ್ಷಣದ ಉಪನಿರ್ದೇಶಕನ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಆ ಇಲಾಖೆಯ ಒಬ್ಬ ಅಧಿಕಾರಿಯಾಗಿರತಕ್ಕದ್ದು.

(2) ಕಾರ್ಯದರ್ಶಿಯು, [1][ನಿರ್ದೇಶಕನ][1] ನಿಯಂತ್ರಣಕ್ಕೊಳಪಟ್ಟು ನಿಯಮಿಸಬಹುದಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

1. 1995ರ ಅಧಿನಿಯಮ ಸಂಖ್ಯೆ 1ರ ಮೂಲಕ 1-6-1995ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಅವನು ಮಂಡಲಿಯ ಸಭೆಗಳಲ್ಲಿ ಹಾಜರಾಗಲು ಹಕ್ಕುಳ್ಳವನಾಗಿರತಕ್ಕದ್ದು, ಆದರೆ ಅದರಲ್ಲಿ ಮತ ನೀಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**19. ಇತರ ಅಧಿಕಾರಿಗಳ ಮತ್ತು ನೌಕರರ ನೇಮಕಾತಿ, ಇತ್ಯಾದಿ.-** (1) ರಾಜ್ಯ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು, ಮಂಡಲಿಯು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಮಂಡಲಿಗೆ ಸಾಧ್ಯವಾಗುವಂತೆ ಅಗತ್ಯವಾಗಬಹುದಾದ ಅಧಿಕಾರಿಗಳನ್ನು ಮತ್ತು ನೌಕರರನ್ನು ([1][ನಿರ್ದೇಶಕ][1] ಮತ್ತು ಕಾರ್ಯದರ್ಶಿಯನ್ನು ಹೊರತುಪಡಿಸಿ) ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ಕಾರಿ ನೌಕರರ ಪೈಕಿಯಿಂದ ನೇಮಕ ಮಾಡಬಹುದು.

(2) (1)ನೇ ಉಪ-ಪ್ರಕರಣದ ಮೇರೆಗಿನ ಪ್ರತಿಯೊಂದು ನೇಮಕಾತಿಯನ್ನು, [1][ನಿರ್ದೇಶಕ][1], ಉಪಾಧ್ಯಕ್ಷ ಮತ್ತು ಪದನಿಮಿತ್ತ ಸದಸ್ಯರಲ್ಲದ ಇಬ್ಬರು ಸದಸ್ಯರನ್ನೊಳಗೊಂಡ ನೇಮಕಾತಿ ಸಮಿತಿ ಎಂದು ಕರೆಯಲಾಗುವ ಮಂಡಲಿಯ ಸಮಿತಿಯು ಕಾಲಕಾಲಕ್ಕೆ ಸಿದ್ಧಪಡಿಸಿದ ವ್ಯಕ್ತಿಗಳ ಪಟ್ಟಿಯನ್ನು ಆಧರಿಸಿ ಮಾಡತಕ್ಕದ್ದು.

(3) (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಪಟ್ಟಿಯನ್ನು ಸಿದ್ಧಪಡಿಸಿರದಿದ್ದರೆ ಅಥವಾ ಸಿದ್ಧಪಡಿಸಲಾಗಿದ್ದ ಪಟ್ಟಿಯು ಸಂಪೂರ್ಣವಾಗಿ ಮುಗಿದುಹೋಗಿದ್ದು ಹೊಸಪಟ್ಟಿಯನ್ನು ಸಿದ್ಧಪಡಿಸಿರದಿದ್ದರೆ, [1][ನಿರ್ದೇಶಕನು][1] ಆರು ತಿಂಗಳುಗಳ ಅವಧಿಯನ್ನು ಮೀರದ ಅವಧಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿನ ಸರ್ಕಾರಿ ನೌಕರರ ಪೈಕಿಯಿಂದ ತಾತ್ಕಾಲಿಕ ನೇಮಕಾತಿಗಳನ್ನು ಮಾಡಬಹುದು ಮತ್ತು [1][ನಿರ್ದೇಶಕನು][1] ಅಂಥ ನೇಮಕಾತಿಗಳ ಬಗ್ಗೆ ಮಂಡಲಿಗೆ ಅದರ ಮುಂದಿನ ಸಭೆಯಲ್ಲಿ ವರದಿ ಮಾಡತಕ್ಕದ್ದು.

(4) [1][ನಿರ್ದೇಶಕ][1], ಕಾರ್ಯದರ್ಶಿ ಹಾಗೂ ಮಂಡಲಿಯ ಇತರ ಅಧಿಕಾರಿಗಳು ಮತ್ತು ನೌಕರರು ಸರ್ಕಾರಿ ನೌಕರರಾಗಿರತಕ್ಕದ್ದು. ಮಂಡಲಿಯು, ಅವರ ಪೈಕಿ ಯಾರ ಮೇಲಾದರೂ, ಅವನ ಯಾವುದೇ ದುರ್ನಡತೆಯ ಬಗ್ಗೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲು ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಬಹುದು.

1. 1995ರ ಅಧಿನಿಯಮ ಸಂಖ್ಯೆ 1ರ ಮೂಲಕ 1-6-1995ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**20. ಸಿಬ್ಬಂದಿಯ ಸಂಬಳ ಮತ್ತು ಭತ್ಯೆಗಳು.-** (1) [1][ನಿರ್ದೇಶಕ][1], ಕಾರ್ಯದರ್ಶಿ ಮತ್ತು ಮಂಡಲಿಯ ಇತರ ಅಧಿಕಾರಿಗಳು ಮತ್ತು ನೌಕರರ ಸಂಬಳ ಮತ್ತು ಭತ್ಯೆಗಳನ್ನು ರಾಜ್ಯದ ಸಂಚಿತ ನಿಧಿಯಿಂದ ಭರಿಸತಕ್ಕದ್ದು.

1. 1995ರ ಅಧಿನಿಯಮ ಸಂಖ್ಯೆ 1ರ ಮೂಲಕ 1-6-1995ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][xxx][1]

1. 1995ರ ಅಧಿನಿಯಮ ಸಂಖ್ಯೆ 18ರ ಮೂಲಕ 3-6-1995ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**21. ಪರೀಕ್ಷಕರ ಸಮಿತಿ.-** (1) ಪರೀಕ್ಷಕರ ಹೆಸರುಗಳ ಪಟ್ಟಿಯನ್ನು ಸಿದ್ಧಪಡಿಸುವ ಉದ್ದೇಶಕ್ಕಾಗಿ ಪರೀಕ್ಷಕರ ಸಮಿತಿ ಎಂದು ಕರೆಯಲಾಗುವ ಒಂದು ಸಮಿತಿ ಇರತಕ್ಕದ್ದು.

(2) ಪರೀಕ್ಷಕರ ಸಮಿತಿಯು,-

(i) [1][ನಿರ್ದೇಶಕ][1] ನನ್ನು;

1. 1995ರ ಅಧಿನಿಯಮ ಸಂಖ್ಯೆ 1ರ ಮೂಲಕ 1-6-1995ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ii) ಈ ಕೆಳಗೆ ನಿರ್ದಿಷ್ಟಪಡಿಸಿರುವ ರೀತಿಯಲ್ಲಿ ಮಂಡಲಿಯು ನೇಮಕ ಮಾಡಿದ ಹತ್ತು ಸದಸ್ಯರನ್ನು:-

(ಎ) ಮಂಡಲಿಯ ಪದನಿಮಿತ್ತ ಸದಸ್ಯರ ಪೈಕಿಯಿಂದ ಮೂವರು;

(ಬಿ) ಮಂಡಲಿಯ ಚುನಾಯಿತ ಸದಸ್ಯರ ಪೈಕಿಯಿಂದ ನಾಲ್ವರು;

(ಸಿ) ಮಂಡಲಿಯ ನಾಮನಿರ್ದೇಶಿತ ಸದಸ್ಯರ ಪೈಕಿಯಿಂದ ಮೂವರನ್ನು

- ಒಳಗೊಂಡಿರತಕ್ಕದ್ದು.

(3) ಪರೀಕ್ಷಕರ ಸಮಿತಿಯು, ಪರೀಕ್ಷಕರ ಹೆಸರುಗಳ ಪಟ್ಟಿಗಳನ್ನು ಸಿದ್ಧಪಡಿಸತಕ್ಕದ್ದು. ಅಂಥ ಪಟ್ಟಿಗಳು ವಿನಿಯಮಗಳ ಮೂಲಕ ನಿಯಮಿಸಬಹುದಾದಷ್ಟು ಹೆಸರುಗಳನ್ನು ಒಳಗೊಂಡಿರತಕ್ಕದ್ದು.

(4) [1][ನಿರ್ದೇಶಕನು,][1] ಪರೀಕ್ಷಕರ ಸಮಿತಿಯು ಸಿದ್ಧಪಡಿಸಿದ ಹೆಸರುಗಳ ಪಟ್ಟಿಯಿಂದ ಪರೀಕ್ಷಕರ ನೇಮಕಾತಿಗಳನ್ನು ಮಾಡತಕ್ಕದ್ದು.

(5) [1][ನಿರ್ದೇಶಕನು,][1] ತುರ್ತು ಪರಿಸ್ಥಿತಿಯಲ್ಲಿ, ಪರೀಕ್ಷಕರ ಸಮಿತಿಯು ಸಿದ್ಧಪಡಿಸಿದ ಪಟ್ಟಿಗಳನ್ನು ಬಿಟ್ಟು, ಹೊರಗಿನಿಂದ ಯಾವನೇ ಪರೀಕ್ಷಕನನ್ನು ನೇಮಕ ಮಾಡಬಹುದು ಮತ್ತು ಯಾವುದೇ ಅಂಥ ನೇಮಕಾತಿಯನ್ನು ಮಾಡಿದಾಗ ಅವನು ಅಂಥ ನೇಮಕಾತಿಯ ಬಗ್ಗೆ ಮಂಡಲಿಗೆ ವರದಿ ಮಾಡತಕ್ಕದ್ದು.

(6) [1][ನಿರ್ದೇಶಕನು,][1] ಹೊರತುಪಡಿಸಿ ಪರೀಕ್ಷಕರ ಸಮಿತಿಯ ಸದಸ್ಯರು, ಅವರ ನೇಮಕಾತಿಯ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಹುದ್ದೆಯನ್ನು ಧಾರಣ ಮಾಡತಕ್ಕದ್ದು.

1. 1995ರ ಅಧಿನಿಯಮ ಸಂಖ್ಯೆ 1ರ ಮೂಲಕ 1-6-1995ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**22. ಇತರ ಸಮಿತಿಗಳು.–** (1) ಮಂಡಲಿಯು, ಉಪವಿಧಿಗಳ ಮೂಲಕ ನಿಯಮಿಸಿದ ರೀತಿಯಲ್ಲಿ, ಈ ಅಧಿನಿಯಮದ ಅಥವಾ ನಿಯಮಗಳ ಅಥವಾ ವಿನಿಮಯಗಳ ಮೇರೆಗೆ ತನ್ನ ಪ್ರಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸುವುದಕ್ಕಾಗಿ ತಾನು ಅವಶ್ಯವೆಂದು ಯೋಚಿಸಬಹುದಾದಂಥ, ಮಂಡಲಿಯ ಸದಸ್ಯರನ್ನು ಒಳಗೊಂಡ ಇತರ ಸಮಿತಿಗಳನ್ನು ನೇಮಕ ಮಾಡಬಹುದು.

(2) ಅಂಥ ಸಮಿತಿಗಳ ಸದಸ್ಯರ ಸಂಖ್ಯೆ ಮತ್ತು ಅವರ ಕರ್ತವ್ಯಗಳು ಮತ್ತು ಪ್ರಕಾರ್ಯಗಳು ಮಂಡಲಿಯು ನಿರ್ಧರಿಸಬಹುದಾದಂತೆ ಇರತಕ್ಕದ್ದು.

**23. ದುರ್ನಡತೆ ಅಥವಾ ನಿರ್ಲಕ್ಷ್ಯಕ್ಕಾಗಿ ಪರೀಕ್ಷಕರ ನೇಮಕಾತಿಯನ್ನು ಕೊನೆಗೊಳಿಸುವುದು.–** (1) ಈ ಅಧಿನಿಯಮದ ಮೇರೆಗೆ ಪರೀಕ್ಷಕನಾಗಿ ನೇಮಕಗೊಂಡ ವ್ಯಕ್ತಿಯು, ದುರ್ನಡತೆ ಅಥವಾ ನಿರ್ಲಕ್ಷತೆಯ ದೋಷಿಯಾಗಿದ್ದು, ಅದು, ಪರೀಕ್ಷಕನೆಂದು ಆಗಿರುವ ಅವನ ನೇಮಕಾತಿ ಸೂಕ್ತವಲ್ಲದ್ದೆಂದು ಯಾವುದೇ ಸಮಯದಲ್ಲಿ ಮಂಡಲಿಗೆ ಕಂಡುಬಂದರೆ, ಮಂಡಲಿಯು ಅವನ ನೇಮಕಾತಿಯನ್ನು ಕೊನೆಗೊಳಿಸಿ ಯಾವುದೇ ಸಮಯದಲ್ಲಿ ಅಥವಾ ನಿರ್ದಿಷ್ಟಪಡಿಸಿದ ಅವಧಿಗಾಗಿ ಪರೀಕ್ಷಕನೆಂದು ನೇಮಕಗೊಳ್ಳಲು ಅಂಥ ವ್ಯಕ್ತಿಯು ಅರ್ಹನಾಗಿರತಕ್ಕದ್ದಲ್ಲವೆಂದು ನಿರ್ದೇಶಿಸಿ ಆದೇಶವನ್ನು ಮಾಡಬಹುದು ಮತ್ತು ಅಂಥ ಆದೇಶವನ್ನು ಮಾಡುವುದಕ್ಕೆ ಮುಂಚೆ ಮಂಡಲಿಯು ವಿನಿಯಮಗಳ ಮೂಲಕ ನಿಯಮಿಸಬಹುದಾದಂಥ ಪ್ರಕ್ರಿಯೆಯನ್ನು ಪಾಲಿಸತಕ್ಕದ್ದು.

(2) (1)ನೇ ಉಪ-ಪ್ರಕರಣದ ಮೇರೆಗೆ ಯಾವ ವ್ಯಕ್ತಿಯ ವಿರುದ್ಧ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಯ ಹೆಸರನ್ನು ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಗೆ 21ನೇ ಪ್ರಕರಣದ ಮೇರೆಗೆ ಒಪ್ಪಿಸಿದ ಹೆಸರುಗಳ ಪಟ್ಟಿಯಲ್ಲಿ ಸೇರಿಸತಕ್ಕದ್ದಲ್ಲ.

(3) (1)ನೇ ಉಪ-ಪ್ರಕರಣದ ಮೇರೆಗೆ ಮಾಡಿದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಆ ಆದೇಶದ ದಿನಾಂಕದಿಂದ ಅರವತ್ತು ದಿವಸಗಳೊಳಗೆ ರಾಜ್ಯ ಸರ್ಕಾರಕ್ಕೆ ಅಪೀಲನ್ನು ಮಾಡಿಕೊಳ್ಳಬಹುದು. ಅಂಥ ಅಪೀಲನ್ನು ದಾಖಲ್ಮಾಡಿದ ಮೇಲೆ ರಾಜ್ಯ ಸರ್ಕಾರವು ತಾನು ಸೂಕ್ತವೆಂದು ಆಲೋಚಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ ಆ ಆದೇಶವನ್ನು ಸ್ಥಿರೀಕರಿಸಬಹುದು, ಮಾರ್ಪಾಟು ಮಾಡಬಹುದು ಅಥವಾ ಅದನ್ನು ವಿಪರ್ಯಯಗೊಳಿಸಬಹುದು. ಅಂಥ ಅಪೀಲಿನ ಮೇಲೆ ರಾಜ್ಯ ಸರ್ಕಾರದ ಆದೇಶವು ಅಂತಿಮವಾಗಿರತಕ್ಕದ್ದು.

**24. ಮಂಡಲಿಯ ನಿಧಿ.–** (1) ಮಂಡಲಿಯು ತನ್ನದೇ ಆದ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ಈ ಕೆಳಕಂಡ ಹಣವನ್ನು ಅದರ ಖಾತೆಗೆ ಜಮೆ ಮಾಡತಕ್ಕದ್ದು:-

(ಎ) ಮಂಡಲಿಯು ವಿಧಿಸಿದ ಫೀಜುಗಳು ಮತ್ತು ಚಾರ್ಜುಗಳು;

(ಬಿ) ರಾಜ್ಯ ಸರ್ಕಾರವು ಸಂದಾಯ ಮಾಡಿದ ವಂತಿಗೆ ಯಾವುದಾದರೂ ಇದ್ದರೆ ಅದು; ಮತ್ತು

(ಸಿ) ಮಂಡಲಿಯು ಅಥವಾ ಮಂಡಲಿಯ ಪರವಾಗಿ ಸ್ವೀಕರಿಸಿದ ಯಾವುದೇ ಹಣ.

(2) ಮಂಡಲಿಯ ನಿಧಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 ರಲ್ಲಿ ಪರಿಭಾಷಿಸಿರುವಂಥ ಅನುಸೂಚಿತ ಬ್ಯಾಂಕಿನಲ್ಲಿ ಇಡತಕ್ಕದ್ದು ಅಥವಾ ಮಂಡಲಿಯ ವಿವೇಚನಾನುಸಾರ ಅದನ್ನು ಭಾರತ ನ್ಯಾಸಗಳ ಅಧಿನಿಯಮ, 1882ರ ಮೂಲಕ ಅಧಿಕೃತಗೊಳಿಸಿದ ಭದ್ರತಾ ಪತ್ರಗಳಲ್ಲಿ ತೊಡಗಿಸತಕ್ಕದ್ದು.

**25. ವಾರ್ಷಿಕ ಲೆಕ್ಕಪತ್ರಗಳು ಮತ್ತು ಹಣಕಾಸು ಅಂದಾಜುಗಳು.–** (1) ಮಂಡಲಿಯ ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸತಕ್ಕದ್ದು ಮತ್ತು ಲೆಕ್ಕ ಪರಿಶೋಧನೆಗಾಗಿ ಅವುಗಳನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ರಾಜ್ಯ ಸರ್ಕಾರವು ಆ ಲೆಕ್ಕಪತ್ರಗಳ ಪರಿಶೋಧನೆಯನ್ನು ಮಾಡಿಸತಕ್ಕದ್ದು ಮತ್ತು ಮಂಡಲಿಯು ಲೆಕ್ಕಪರಿಶೋಧನೆಗಾಗಿ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ವೆಚ್ಚಗಳನ್ನು ಸಂದಾಯ ಮಾಡತಕ್ಕದ್ದು.

(2) ಮಂಡಲಿಯು ನಿಯಮಿಸಬಹುದಾದಂಥ ದಿನಾಂಕಕ್ಕೆ ಮುಂಚೆ ಮುಂಬರುವ ವರ್ಷದ ಹಣಕಾಸು ಅಂದಾಜುಗಳನ್ನು ತಯಾರಿಸತಕ್ಕದ್ದು ಮತ್ತು ಅವುಗಳನ್ನು ರಾಜ್ಯ ಸರ್ಕಾರದ ಮಂಜೂರಾತಿಗಾಗಿ ಕಳುಹಿಸಿಕೊಡತಕ್ಕದ್ದು. ರಾಜ್ಯ ಸರ್ಕಾರವು ಅವುಗಳಿಗೆ ಸಂಬಂಧಿಸಿದಂತೆ ತಾನು ಸೂಕ್ತವೆಂದು ಆಲೋಚಿಸುವಂಥ ಆದೇಶವನ್ನು ಹೊರಡಿಸಬಹುದು ಮತ್ತು ಅದನ್ನು ಮಂಡಲಿಗೆ ತಿಳಿಸಬಹುದು ಮತ್ತು ಮಂಡಲಿಯು ಅಂಥ ಆದೇಶಗಳನ್ನು ಜಾರಿಗೊಳಿಸತಕ್ಕದ್ದು.

(3) ಮಂಡಲಿಯು, ಆ ವರ್ಷವು ಮುಗಿದಂದಿನಿಂದ ಮೂರು ತಿಂಗಳೊಳಗೆ ನಿಯಮಿಸಿದ ರೀತಿಯಲ್ಲಿ ಹಿಂದಿನ ವರ್ಷದ ತನ್ನ ಕಾರ್ಯ ಚಟುವಟಿಕೆಗಳ ಬಗ್ಗೆ ಸಂಪೂರ್ಣ ವಿವರಗಳನ್ನು ಕೊಡುವ ವಾರ್ಷಿಕ ವರದಿಯನ್ನು ತಯಾರಿಸತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು. ಅಂಥ ಪ್ರತಿಯೊಂದು ವರದಿಯನ್ನು ರಾಜ್ಯ ಸರ್ಕಾರವು ಸ್ವೀಕರಿಸಿದ ತರುವಾಯ ಆದಷ್ಟು ಬೇಗ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

[1][ವಿವರಣೆ:- ಈ ಪ್ರಕರಣದಲ್ಲಿ 'ವರ್ಷ' ಎಂದರೆ ಅಧಿಕೃತ ವರ್ಷ:

ಪರಂತು, 1975-76ನೇ ವರ್ಷದ ಉದ್ದೇಶಕ್ಕಾಗಿ 'ವರ್ಷ' ಎಂದರೆ 1975ರ ಆಗಸ್ಟ್ ಮೊದಲನೇ ದಿವಸದಂದು ಪ್ರಾರಂಭವಾಗುವ ಮತ್ತು 1976ರ ಮಾರ್ಚ್ 31 ರಂದು ಕೊನೆಗೊಳ್ಳುವ ಎಂಟು ತಿಂಗಳುಗಳ ಅವಧಿ.][1]

1. 1976ರ ಅಧಿನಿಯಮ ಸಂಖ್ಯೆ 9ರ ಮೂಲಕ 4-3-1976ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**26. ಮಂಡಲಿಯ ವಿನಿಯಮ ರಚನಾಧಿಕಾರ.–** (1) ಮಂಡಲಿಯು, ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಈ ಅಧಿನಿಯಮಕ್ಕೆ ಮತ್ತು ನಿಯಮಗಳಿಗೆ ಅಸಂಗತವಲ್ಲದ ವಿನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ವಿನಿಯಮಗಳು ಈ ಕೆಳಕಂಡ ಎಲ್ಲಾ ಅಥವಾ ಅವುಗಳ ಪೈಕಿ ಯಾವುದೇ ವಿಷಯದ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:-

(ಎ) ಪರೀಕ್ಷಕರ ನೇಮಕಾತಿ ಮತ್ತು ಅವರ ಸಂಭಾವನೆ;

(ಬಿ) ಪರೀಕ್ಷಕರ ಅರ್ಹತೆಗಳು ಮತ್ತು ಅನರ್ಹತೆಗಳು;

(ಸಿ) ಪರೀಕ್ಷೆಗಳನ್ನು ನಡೆಸುವುದಕ್ಕಾಗಿ ಮತ್ತು ಅವುಗಳ ಫಲಿತಾಂಶಗಳನ್ನು ಪ್ರಕಟಿಸುವುದಕ್ಕಾಗಿ ವ್ಯವಸ್ಥೆಗಳು;

(ಡಿ) ಪರೀಕ್ಷೆಗಳಿಗೆ ಅಭ್ಯರ್ಥಿಗಳ ಪ್ರವೇಶ ಮತ್ತು ಅಂಥ ಪ್ರವೇಶಗಳನ್ನು ನಿಯಂತ್ರಿಸುವ ಷರತ್ತುಗಳು;

(ಇ) ಯಾವುದೇ ವಿಷಯದಲ್ಲಿ ಅಥವಾ ಇಡೀ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದಕ್ಕಾಗಿ ಅಗತ್ಯವಾದ ಅಂಕಗಳು ಮತ್ತು ಯಾವುದೇ ವಿಷಯದಲ್ಲಿ ವಿನಾಯಿತಿ, ಪ್ರಶಸ್ತಿ ಅಥವಾ ಘನತೆ;

(ಎಫ್) ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಫೀಜುಗಳು ಮತ್ತು ಚಾರ್ಜುಗಳನ್ನು ನಿಗದಿಪಡಿಸುವುದು;

(ಜಿ) ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ಕೊಡುವುದು;

(ಹೆಚ್) ಪರೀಕ್ಷಕರ ಸಮಿತಿಯ ಸಭೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ, ಅಂಥ ಸಭೆಗಳಲ್ಲಿ ಕೋರಂ ಆಗಲು ಅಗತ್ಯವಾದ ಸದಸ್ಯರ ಸಂಖ್ಯೆ ಮತ್ತು ಪರೀಕ್ಷಕರ ಸಮಿತಿಯ ಸದಸ್ಯರು ಹಾಗೂ ಆ ಸಮಿತಿಗೆ ಕೋ-ಆಪ್ಟ್ ಆಗಿರುವ ವ್ಯಕ್ತಿಗಳು ಪಡೆಯಬೇಕಾದ ಪ್ರಯಾಣ ಭತ್ಯೆ ಮತ್ತು ಇತರ ಭತ್ಯೆಗಳು;

(ಐ) 23ನೇ ಪ್ರಕರಣದ ಮೇರೆಗೆ ಆದೇಶವನ್ನು ಮಾಡುವುದಕ್ಕೆ ಮುಂಚೆ ಪಾಲಿಸಬೇಕಾದ ಪ್ರಕ್ರಿಯೆ;

(ಜೆ) ಈ ಅಧಿನಿಯಮದ ಮೇರೆಗೆ ವಿನಿಯಮಗಳ ಮೂಲಕ ಉಪಬಂಧಿಸಬೇಕಾದ ಅಥವಾ ಉಪಬಂಧಿಸಬಹುದಾದಂಥ ಎಲ್ಲಾ ವಿಷಯಗಳಿಗಾಗಿ ವ್ಯವಸ್ಥೆ ಮಾಡುವುದು.

**27. ವಿನಿಯಮಗಳಿಗೆ ರಾಜ್ಯ ಸರ್ಕಾರದ ಅನುಮೋದನೆ.–** 26ನೇ ಪ್ರಕರಣದ ಮೇರೆಗೆ ರಚಿಸಿದ ಯಾವುದೇ ವಿನಿಯಮವು, ಅದನ್ನು ರಾಜ್ಯ ಸರ್ಕಾರವು ಅನುಮೋದಿಸಿದ ಹೊರತು ಪರಿಣಾಮಕಾರಿಯಾಗತಕ್ಕದ್ದಲ್ಲ.

**28. ಮೊದಲ ವಿನಿಯಮಗಳು ಮತ್ತು ಉಪವಿಧಿಗಳ ರಚನೆ.–** 26ನೇ ಪ್ರಕರಣ ಅಥವಾ 31ನೇ ಪ್ರಕರಣದಲ್ಲಿ ಏನೇ ಇದ್ದರೂ, ಮೊದಲ ವಿನಿಯಮಗಳು ಹಾಗೂ ಮೊದಲ ಉಪವಿಧಿಗಳನ್ನು ರಾಜ್ಯ ಸರ್ಕಾರವು ರಚಿಸತಕ್ಕದ್ದು ಮತ್ತು ಅವು, ಸದರಿ ಪ್ರಕರಣಗಳ ಮೇರೆಗೆ ಮಂಡಲಿಯು ಹೊಸ ವಿನಿಯಮಗಳನ್ನು ಅಥವಾ ಉಪವಿಧಿಗಳನ್ನು ರಚಿಸುವವರೆಗೆ ಮತ್ತು ಅವುಗಳಿಗೆ ರಾಜ್ಯ ಸರ್ಕಾರವು ಅನುಮೋದನೆಯನ್ನು ಕೊಡುವವರೆಗೆ ಜಾರಿಯಲ್ಲಿರತಕ್ಕದ್ದು.

**29. ವಿಶ್ವವಿದ್ಯಾನಿಲಯದ ಪ್ರತಿನಿಧಿಗಳ ಮೊದಲ ನೇಮಕಾತಿ.–** 4ನೇ ಪ್ರಕರಣದಲ್ಲಿ ಏನೇ ಇದ್ದರೂ, 4ನೇ ಪ್ರಕರಣದ, (4)ನೇ ಉಪ-ಪ್ರಕರಣದ (ಬಿ) ಪ್ಯಾರಾದ ಮೇರೆಗಿನ ಸದಸ್ಯರನ್ನು ಮೊದಲಬಾರಿಗೆ ಮಂಡಲಿಯನ್ನು ರಚಿಸಿದ ತರುವಾಯ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಬಹುದು. ಆದರೆ, ಹಾಗೆ ನಾಮನಿರ್ದೇಶಿತರಾದ ಸದಸ್ಯರು, ಆ ಪ್ಯಾರಾದಲ್ಲಿ ಉಪಬಂಧಿಸಿದಂತೆ ಚುನಾಯಿತರಾದ ಸದಸ್ಯರು, ಅವರಿಗೆ ಬದಲಾಗಿ ಬರುವವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಹಾಗೆ

ಚುನಾಯಿತರಾದ ಸದಸ್ಯರು, ನಾಮನಿರ್ದೇಶಿತ ಸದಸ್ಯರನ್ನು ಬದಲಾಯಿಸದಿದ್ದರೆ ಅವರು ಪದಧಾರಣ ಮಾಡಬಹುದಾಗಿದ್ದ ಅವಧಿಯವರೆಗೆ ಮಾತ್ರ ಪದಧಾರಣ ಮಾಡತಕ್ಕದ್ದು.

**30. ಖಾಲಿ ಸ್ಥಾನಗಳು, ಇತ್ಯಾದಿಗಳ ಕಾರಣದಿಂದಾಗಿ ವ್ಯವಹರಣೆಗಳು ಅಸಿಂಧುವಾಗದಿರುವುದು.–** ಮಂಡಲಿಯ ಅಥವಾ ಪರೀಕ್ಷಕರ ಸಮಿತಿಯ ಅಥವಾ ಮಂಡಲಿಯು ರಚಿಸಿದ ಇತರ ಯಾವುದೇ ಸಮಿತಿಯ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು ಮಂಡಲಿಯಲ್ಲಿನ ಅಥವಾ ಸಮಿತಿಯಲ್ಲಿನ ಯಾವುದೇ ಖಾಲಿ ಸ್ಥಾನದಿಂದಾಗಿ ಅಥವಾ ಅವುಗಳ ರಚನೆಯಲ್ಲಿನ ಯಾವುದೇ ನ್ಯೂನತೆಯಿಂದಾಗಿ ಅಥವಾ ಪ್ರಕರಣದ ಗುಣಾವಗುಣಗಳಿಗೆ ಬಾಧಕವನ್ನುಂಟು ಮಾಡುವ ಯಾವುದೇ ಇತರ ಲೋಪ ಅಥವಾ ದುರ್ಬಲತೆಯ ಕಾರಣದಿಂದಾಗಿ ಮಾತ್ರವೇ ಅಸಿಂಧುವಾಗತಕ್ಕದ್ದಲ್ಲ.

**31. ಉಪವಿಧಿಗಳನ್ನು ರಚಿಸಲು ಮಂಡಲಿಯ ಅಧಿಕಾರ.–** (1) ಮಂಡಲಿಯು ಈ ಕೆಳಕಂಡ ಎಲ್ಲಾ ವಿಷಯಗಳಿಗೆ ಅಥವಾ ಅವುಗಳ ಪೈಕಿ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮಕ್ಕೆ, ನಿಯಮಗಳಿಗೆ ಮತ್ತು ವಿನಿಯಮಗಳಿಗೆ ಅಸಂಗತವಾಗದ ಉಪವಿಧಿಗಳನ್ನು ಅಧಿಸೂಚನೆ ಮೂಲಕ ರಚಿಸಬಹುದು, ಎಂದರೆ:–

(ಎ) ಮಂಡಲಿಯ ಮತ್ತು ಸಮಿತಿಯ ಸಭೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ ಮತ್ತು ಅಂಥ ಸಭೆಗಳಲ್ಲಿ ಕೋರಂ ಆಗಲು ಅಗತ್ಯವಾದ ಸದಸ್ಯರ ಸಂಖ್ಯೆ;

(ಬಿ) ಮಂಡಲಿಯ ಮತ್ತು ಸಮಿತಿಯ ಸದಸ್ಯರು ಮತ್ತು ಮಂಡಲಿಯೊಂದಿಗೆ ತಾತ್ಕಾಲಿಕವಾಗಿ ಸಂಯೋಜಿಸಿಕೊಳ್ಳಲಾದ ವ್ಯಕ್ತಿಗಳು ಅಥವಾ ಸಮಿತಿಗೆ ಕೋ–ಆಪ್ಟ್ ಮಾಡಿಕೊಂಡ ವ್ಯಕ್ತಿಗಳು ಪಡೆಯಬಹುದಾದ ಪ್ರಯಾಣ ಭತ್ಯೆಗಳು ಮತ್ತು ಇತರ ಭತ್ಯೆಗಳು;

(ಸಿ) ಈ ಅಧಿನಿಯಮದ, ನಿಯಮಗಳ ಅಥವಾ ವಿನಿಯಮಗಳ ಮೂಲಕ ಉಪಬಂಧಿಸದೆ ಇರುವಂಥ ಮತ್ತು ಮಂಡಲಿಗೆ ಮತ್ತು ಅಂಥ ಸಮಿತಿಗಳಿಗೆ ಮಾತ್ರ ಸಂಬಂಧಪಡುವ ಯಾವುದೇ ಇತರ ವಿಷಯಗಳು.

(2) (1)ನೇ ಉಪ–ಪ್ರಕರಣದ ಮೇರೆಗೆ ರಚಿಸಿದ ಯಾವುದೇ ಉಪವಿಧಿಯು ರಾಜ್ಯ ಸರ್ಕಾರವು ಅದನ್ನು ಅನುಮೋದಿಸಿದ ಹೊರತು ಪರಿಣಾಮಕಾರಿಯಾಗತಕ್ಕದ್ದಲ್ಲ.

**32. ಮಂಡಲಿಯು ಒದಗಿಸಬೇಕಾದ ಮಾಹಿತಿ, ವಿವರ ಪಟ್ಟಿಕೆಗಳು, ಇತ್ಯಾದಿ.–** (1) ಮಂಡಲಿಯು, ರಾಜ್ಯ ಸರ್ಕಾರವು ಅಥವಾ ಸಾರ್ವಜನಿಕ ಶಿಕ್ಷಣ ನಿರ್ದೇಶಕರು ಅಗತ್ಯಪಡಿಸಬಹುದಾದಂಥ ವರದಿಗಳನ್ನು, ವಿವರಪಟ್ಟಿಕೆಗಳನ್ನು ಮತ್ತು ವಿವರ ಪತ್ರಗಳನ್ನು ಮತ್ತು ರಾಜ್ಯ ಸರ್ಕಾರವು ಅಥವಾ ನಿರ್ದೇಶಕನು ಅಗತ್ಯಪಡಿಸಬಹುದಾದಂಥ, ಮಂಡಲಿಯ ಕೆಲಸಕ್ಕೆ ಸಂಬಂಧಿಸಿದ ಯಾವುದೇ ವಿಷಯಕ್ಕೆ ಸಂಬಂಧಪಟ್ಟ ಹೆಚ್ಚಿನ ಮಾಹಿತಿಯನ್ನು ರಾಜ್ಯ ಸರ್ಕಾರಕ್ಕೆ ಅಥವಾ ಸಾರ್ವಜನಿಕ ಶಿಕ್ಷಣ ನಿರ್ದೇಶಕನಿಗೆ ಒದಗಿಸತಕ್ಕದ್ದು.

(2) ರಾಜ್ಯ ಸರ್ಕಾರವು, ಮಂಡಲಿಯು ಒದಗಿಸಿದ ವರದಿಯನ್ನು, ವಿವರಪಟ್ಟಿಕೆಯನ್ನು ಅಥವಾ ವಿವರಪತ್ರವನ್ನು ಮತ್ತು ಯಾವುದೇ ಮಾಹಿತಿಯನ್ನು ಪರ್ಯಾಲೋಚಿಸಿದ ತರುವಾಯ ಅವಶ್ಯಕವಾಗಬಹುದಾದಂಥ ಮತ್ತು ಈ ಅಧಿನಿಯಮಕ್ಕೆ ಸುಸಂಗತವಾದ ನಿರ್ದೇಶನಗಳನ್ನು ನೀಡಬಹುದು ಮತ್ತು ಮಂಡಲಿಯು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

**33. ರಾಜ್ಯ ಸರ್ಕಾರದ ಅಧಿಕಾರಗಳು.–** (1) ರಾಜ್ಯ ಸರ್ಕಾರವು, ಮಂಡಲಿಯು ನಿರ್ವಹಿಸಿದ ಅಥವಾ ಮಾಡಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಮಂಡಲಿಯೊಡನೆ ಪತ್ರ ವ್ಯವಹಾರ

ನಡೆಸುವ ಮತ್ತು ಮಂಡಲಿಗೆ ಸಂಬಂಧಿಸಿದಂಥ ಯಾವುದೇ ವಿಷಯದ ಬಗ್ಗೆ ತನ್ನ ಅಭಿಪ್ರಾಯಗಳನ್ನು ಮಂಡಲಿಗೆ ತಿಳಿಸುವ ಹಕ್ಕನ್ನು ಹೊಂದಿರತಕ್ಕದ್ದು.

(2) ಮಂಡಲಿಯು, ಆ ಪತ್ರ ವ್ಯವಹಾರದ ಬಗ್ಗೆ ತಾನು ಕೈಗೊಳ್ಳಲು ಉದ್ದೇಶಿಸಿದ ಅಥವಾ ಕೈಗೊಂಡ ಅಂಥ ಕ್ರಮವು ಯಾವುದಾದರೂ ಇದ್ದರೆ, ಅದನ್ನು ರಾಜ್ಯ ಸರ್ಕಾರಕ್ಕೆ ವರದಿ ಮಾಡತಕ್ಕದ್ದು ಮತ್ತು ಕ್ರಮ ಕೈಗೊಳ್ಳಲು ತಪ್ಪಿದರೆ ಆ ಬಗ್ಗೆ ವಿವರಣೆ ಒದಗಿಸತಕ್ಕದ್ದು.

(3) ಮಂಡಲಿಯು, ರಾಜ್ಯ ಸರ್ಕಾರಕ್ಕೆ ಮನದಟ್ಟಾಗುವಂತೆ ಯುಕ್ತ ಕಾಲದೊಳಗೆ ಕ್ರಮವನ್ನು ಕೈಗೊಳ್ಳದಿದ್ದರೆ, ರಾಜ್ಯ ಸರ್ಕಾರವು, ಮಂಡಲಿಯು ಒದಗಿಸಿದ ಯಾವುದೇ ವಿವರಣೆಯನ್ನು ಅಥವಾ ಮನವಿಯನ್ನು ಪರ್ಯಾಲೋಚಿಸಿದ ತರುವಾಯ, ಈ ಅಧಿನಿಯಮಕ್ಕೆ ಸೂಕ್ತವಾದುದೆಂದು ತಾನು ಯೋಚಿಸುವಂಥ ಸುಸಂಗತವಾದ ನಿರ್ದೇಶನಗಳನ್ನು ನೀಡಬಹುದು ಮತ್ತು ಮಂಡಲಿಯು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

(4) ಯಾವುದೇ ತುರ್ತು ಪರಿಸ್ಥಿತಿಯಲ್ಲಿ ಕೂಡಲೇ ಕ್ರಮಕೈಗೊಳ್ಳುವುದು ಅಗತ್ಯವೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ, ರಾಜ್ಯ ಸರ್ಕಾರವು ಮಂಡಲಿಯೊಂದಿಗೆ ಮುಂಚೆಯೇ ಸಮಾಲೋಚನೆ ಮಾಡದೆಯೇ, ತಾನು ಅವಶ್ಯವೆಂದು ಭಾವಿಸುವಂಥ ಮತ್ತು ಈ ಅಧಿನಿಯಮಕ್ಕೆ ಸುಸಂಗತವಾದಂಥ ಕ್ರಮವನ್ನು ಕೈಗೊಳ್ಳಬಹುದು ಮತ್ತು ಕೈಗೊಂಡ ಕ್ರಮದ ಬಗ್ಗೆ ತಕ್ಷಣವೇ ಮಂಡಲಿಗೆ ತಿಳಿಸತಕ್ಕದ್ದು.

(5) ರಾಜ್ಯ ಸರ್ಕಾರವು, ಮಂಡಲಿಯ ಯಾವುದೇ ನಿರ್ಣಯದ ಅಥವಾ ಆದೇಶದ ಜಾರಿಯನ್ನು ತಡೆಹಿಡಿಯಬಹುದು ಅಥವಾ ಮಾಡಬೇಕೆಂದು ಮಂಡಲಿಯು ಆದೇಶಿಸಿದ ಅಥವಾ ಮಾಡಬೇಕೆಂದು ಮಂಡಲಿಯು ಆದೇಶಿಸಿದೆ ಎಂದು ತಾತ್ಪರ್ಯವಾಗುವ ಯಾವುದೇ ಕಾರ್ಯವನ್ನು, ಅಂಥ ನಿರ್ಣಯವು, ಆದೇಶವು ಅಥವಾ ಕಾರ್ಯವು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಮಂಡಲಿಗೆ ಪ್ರದಾನ ಮಾಡಿದ ಅಧಿಕಾರಗಳನ್ನು ಮೀರಿದುದಾಗಿದೆಯೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ, ಆ ಬಗೆಗಿನ ಕಾರಣಗಳನ್ನು ನಿರ್ದಿಷ್ಟಪಡಿಸಿ, ಲಿಖಿತ ಆದೇಶದ ಮೂಲಕ ಅದನ್ನು ರಾಜ್ಯ ಸರ್ಕಾರವು, ಮಂಡಳಿಯ ಯಾವುದೇ ನಿರ್ಣಯದ ಅಥವಾ ಆದೇಶದ ಜಾರಿಯನ್ನು ತಡೆಹಿಡಿಯಬಹುದು ಮತ್ತು ನಿಷೇಧಿಸಬಹುದು.

**34. ನಿಯಮ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಮತ್ತು ಪೂರ್ವ ಪ್ರಕಟಣೆಯ ಷರತ್ತಿಗೊಳಪಟ್ಟು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಅದರ ಮುಂದೆ ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಕ್ಕೆ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳಿಗೆ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಅಧಿನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವುಂಟು ಮಾಡತಕ್ಕದ್ದಲ್ಲ.

**35. ಅಧ್ಯಕ್ಷನ, ಉಪಾಧ್ಯಕ್ಷನ ಮತ್ತು ಸದಸ್ಯರ ಜವಾಬ್ದಾರಿ.–** ಮಂಡಲಿಯ ಅಥವಾ ಯಾವುದೇ ಸಮಿತಿಯ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಪ್ರತಿಯೊಬ್ಬ ಸದಸ್ಯನು, ಮಂಡಲಿಯ ನಿಧಿಗಳ ಯಾವುದೇ ಉದ್ದೇಶಪೂರ್ವಕ ದುರ್ವಿನಿಯೋಗದಲ್ಲಿ ಅವನು ಸಹಭಾಗಿ ಆಗಿದ್ದರೆ ಅಥವಾ ಅದು ಅವನ ಕರ್ತವ್ಯದ ನಿರ್ಲಕ್ಷ್ಯದಿಂದ ಆಗಿದ್ದರೆ ಅಥವಾ ಅದರಿಂದ ಅನುಕೂಲ ಮಾಡಿಕೊಡಲಾಗಿದೆಯೋ ಅದಕ್ಕಾಗಿ ಅವನು ವೈಯುಕ್ತಿಕವಾಗಿ ಜವಾಬ್ದಾರನಾಗಿರತಕ್ಕದ್ದು ಮತ್ತು ಅವನ ವಿರುದ್ಧದ ಯಾವುದೇ ಇತರ ಕ್ರಮಕ್ಕೆ ಬಾಧಕವಾಗದಂತೆ ಹಾಗೆ ದುರ್ವಿನಿಯೋಗವಾದ ಹಣವು ರಾಜ್ಯ ಸರ್ಕಾರದ ಸ್ವತ್ತಾಗಿದ್ದರೆ ಹೇಗೋ ಹಾಗೆ ಅದನ್ನು ವಸೂಲು ಮಾಡಲು ಅವನ ವಿರುದ್ಧ ದಾವೆ ಹೂಡಬಹುದು:

ಪರಂತು, ಯಾರೇ ವ್ಯಕ್ತಿಯು, ಮಂಡಲಿಯು ಅಥವಾ ಮಂಡಲಿಯ ಪರವಾಗಿ ಮಾಡಿಕೊಂಡ ಯಾವುದೇ ಕರಾರಿಗೆ ಅಥವಾ ಒಪ್ಪಂದಕ್ಕೆ ಅಥವಾ ಭರಿಸಿದ ಯಾವುದೇ ವೆಚ್ಚಗಳಿಗೆ ಸಂಬಂಧಿಸಿದಂತೆ, ಆ ಕರಾರನ್ನು ಅಥವಾ ಒಪ್ಪಂದವನ್ನು ಸದ್ಭಾವನೆಯಿಂದ ಮತ್ತು ತನ್ನ ಕರ್ತವ್ಯಗಳ ನಿರ್ವಹಣೆಯಲ್ಲಿ ಮಾಡಿಕೊಂಡಿದ್ದರೆ ಅಥವಾ ಆ ವೆಚ್ಚಗಳನ್ನು ಭರಿಸಿದ್ದರೆ ಅವನು ಆ ಬಗ್ಗೆ ವೈಯಕ್ತಿಕವಾಗಿ ಹೊಣೆಗಾರನಾಗತಕ್ಕದ್ದಲ್ಲ ಮತ್ತು ಮಂಡಲಿಯ ನಿಧಿಯು, ಯಾವುದೇ ಕರಾರಿಗೆ ಅಥವಾ ಒಪ್ಪಂದಕ್ಕೆ ಸಂಬಂಧಪಟ್ಟ ಎಲ್ಲಾ ವೆಚ್ಚಗಳಿಗೆ ಮತ್ತು ಅಂಥ ಎಲ್ಲಾ ಖರ್ಚುಗಳಿಗೆ ಬದ್ಧವಾಗತಕ್ಕದ್ದು ಮತ್ತು ಅವುಗಳನ್ನು ಆ ನಿಧಿಗೆ ಖರ್ಚು ಹಾಕತಕ್ಕದ್ದು.

**36. [1][ನಿರ್ದೇಶಕ ಅಥವಾ ಉಪಾಧ್ಯಕ್ಷ][1] ಮೊದಲಾದವರು ಲೋಕನೌಕರರಾಗಿರುವುದು.–** [1][ನಿರ್ದೇಶಕ ಅಥವಾ ಉಪಾಧ್ಯಕ್ಷ][1], ಸದಸ್ಯರು, ಮಂಡಳಿಯ ಕಾರ್ಯದರ್ಶಿ ಮತ್ತು ಇತರ ಅಧಿಕಾರಿಗಳು ಹಾಗೂ ನೌಕರರು ಮತ್ತು ಮಂಡಲಿಯು ನಡೆಸುವ ಯಾವುದೇ ಪರೀಕ್ಷೆಗೆ ಸಂಬಂಧಿಸಿದಂತೆ ಯಾವುದೇ ಕರ್ತವ್ಯವನ್ನು ವಹಿಸಲಾಗಿರುವ ಪ್ರತಿಯೊಬ್ಬ ವ್ಯಕ್ತಿಯು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಲೋಕ ನೌಕರರೆಂದು ಭಾವಿಸತಕ್ಕದ್ದು.

1. 1995ರ ಅಧಿನಿಯಮ ಸಂಖ್ಯೆ 1ರ ಮೂಲಕ 1-6-1995ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**37. ಸದ್ಭಾವನೆಯಿಂದ ಮಾಡಿದ ಕಾರ್ಯಗಳಿಗಾಗಿ ದಾವೆಗಳ ಪ್ರತಿಷೇಧ, ಇತ್ಯಾದಿ.–** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಮಂಡಲಿಯ ವಿರುದ್ಧ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ಸಮಿತಿಯ ವಿರುದ್ಧ ಅಥವಾ [1][ನಿರ್ದೇಶಕ ಅಥವಾ ಉಪಾಧ್ಯಕ್ಷ][1], ಕಾರ್ಯದರ್ಶಿ ಅಥವಾ ಯಾವನೇ ಇತರ ಅಧಿಕಾರಿ ಅಥವಾ ನೌಕರನ ವಿರುದ್ಧ, ಅಥವಾ ಮಂಡಲಿಯ, ಸಮಿತಿಯ, ಅಧ್ಯಕ್ಷರ, ಉಪಾಧ್ಯಕ್ಷರ, ಕಾರ್ಯದರ್ಶಿಯ, ಮಂಡಲಿಯ ಅಥವಾ ಯಾರೇ ಅಧಿಕಾರಿ ಅಥವಾ ನೌಕರನ ನಿರ್ದೇಶನಗಳ ಮೇರೆಗೆ ಮತ್ತು ಅದಕ್ಕನುಸಾರವಾಗಿ ಕಾರ್ಯನಿರ್ವಹಿಸುವ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆಗೆ ಅಥವಾ ಇತರ ಕಾನೂನು ವ್ಯವಹರಣೆಗಳಿಗೆ ಅವಕಾಶವಿರತಕ್ಕದ್ದಲ್ಲ.

1. 1995ರ ಅಧಿನಿಯಮ ಸಂಖ್ಯೆ 1ರ ಮೂಲಕ 1-6-1995ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**38. ದಾವೆಗಳಿಗಾಗಿ ಮುಂಚಿನ ನೋಟೀಸು, ಇತ್ಯಾದಿ.–** ಮಂಡಲಿಯ, ಸಮಿತಿಯ, [1][ನಿರ್ದೇಶಕರ,][1] [1][ನಿರ್ದೇಶಕರ ಅಥವಾ ಉಪಾಧ್ಯಕ್ಷರ,][1] ಕಾರ್ಯದರ್ಶಿಯ ವಿರುದ್ಧ ಅಥವಾ ಮಂಡಳಿಯ, ಸಮಿತಿಯ, [1][ನಿರ್ದೇಶಕರ,][1] [1][ನಿರ್ದೇಶಕರ ಅಥವಾ ಉಪಾಧ್ಯಕ್ಷರ,][1] ಕಾರ್ಯದರ್ಶಿಯ ಆದೇಶದ ಅಥವಾ ನಿರ್ದೇಶನದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯ ವಿರುದ್ಧ ಅಥವಾ ಈ ಅಧಿನಿಯಮದ, ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ವಿನಿಯಮದ, ಉಪವಿಧಿಯ ಅನುಸಾರ, ಅಥವಾ ಅದರ ಮೇರೆಗೆ ಹೊರಡಿಸಿದ ಆದೇಶದ ಅನುಸಾರ ಮಾಡಿದ ಅಥವಾ ಮಾಡಿರುವುದಾಗಿ ತಾತ್ಪರ್ಯವಾಗುವ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ

ಯಾರೇ ಅಧಿಕಾರಿಯ ಅಥವಾ ನೌಕರನ ವಿರುದ್ಧ, ವಾದಿಯು ವ್ಯಾಜ್ಯ ಕಾರಣವನ್ನು, ಕೋರಿದ ಪರಿಹಾರದ ಸ್ವರೂಪವನ್ನು, ಕ್ಲೇಮು ಮಾಡಿದ ಹಾನಿ ಪರಿಹಾರದ ಮೊಬಲಗನ್ನು, ತನ್ನ ಹೆಸರನ್ನು ಮತ್ತು ವಾಸ ಸ್ಥಳವನ್ನು ಮತ್ತು ತಾನು ಕ್ಲೇಮು ಮಾಡಿರುವ ಪರಿಹಾರವನ್ನು ನಿರೂಪಿಸುವ ಲಿಖಿತ ನೋಟೀಸನ್ನು, ಅಂಥ ನೋಟೀಸನ್ನು ಮಂಡಲಿಗೆ ಕೊಡುವುದಿದ್ದರೆ, ಅದರ ಕಚೇರಿಗೆ ತಲುಪಿಸಿದ ಅಥವಾ ಕೊಟ್ಟ ತರುವಾಯದ ಮತ್ತು ಅಂಥ ನೋಟೀಸನ್ನು [1][ನಿರ್ದೇಶಕರಿಗೆ,][1] [1][ನಿರ್ದೇಶಕರಿಗೆ ಅಥವಾ ಉಪಾಧ್ಯಕ್ಷರಿಗೆ,][1] ಕಾರ್ಯದರ್ಶಿಗೆ ಅಥವಾ ಇತರ ಅಧಿಕಾರಿಗೆ, ನೌಕರನಿಗೆ ಅಥವಾ ವ್ಯಕ್ತಿಗೆ ಕೊಡುವುದಿದ್ದರೆ, ಅಂಥವರಿಗೆ ತಲುಪಿಸಿದ ತರುವಾಯದ ಅಥವಾ ಅವರ ಕಛೇರಿಗೆ ಅಥವಾ ನಿವಾಸ ಸ್ಥಳಕ್ಕೆ ಕೊಟ್ಟ ತರುವಾಯದ ಅರವತ್ತು ದಿನಗಳು ಮುಕ್ತಾಯವಾಗುವವರೆಗೆ ಮತ್ತು ಅಂಥ ನೋಟೀಸನ್ನು ಹಾಗೆ ತಲುಪಿಸಲಾಗಿದೆ ಅಥವಾ ಕೊಡಲಾಗಿದೆ ಎಂಬ ವಿವರಣೆಯು ಅಂಥ ವಾದ ಪತ್ರದಲ್ಲಿ ಇದ್ದ ಹೊರತು ಯಾವುದೇ ದಾವೆಯನ್ನು ಹೂಡತಕ್ಕದ್ದಲ್ಲ.

1. 1995ರ ಅಧಿನಿಯಮ ಸಂಖ್ಯೆ 1ರ ಮೂಲಕ 1–6–1995ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಈ ಪ್ರಕರಣದಲ್ಲಿ ಇರುವುದು ಯಾವುದೂ, ಯಾವ ದಾವೆಯಲ್ಲಿ ನಿರ್ಬಂಧಕಾಜ್ಞೆಯನ್ನು ಮಾತ್ರ ಕೋರಲಾಗಿದೆಯೋ ಮತ್ತು ಹಾಗೆ ಕೋರಿರುವ ನಿರ್ಬಂಧಕಾಜ್ಞೆಯ ಉದ್ದೇಶವು, ನೋಟೀಸನ್ನು ಕೊಟ್ಟರೆ ಅಥವಾ ದಾವೆ ಹೂಡುವುದನ್ನು ಮುಂದೂಡಿದರೆ ವಿಫಲವಾಗುವುದೋ ಆ ಯಾವುದೇ ದಾವೆಗೆ ಅನ್ವಯವಾಗಿರತಕ್ಕದ್ದಲ್ಲ.

**39. ತೊಂದರೆಗಳ ನಿವಾರಣೆ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ರಾಜ್ಯ ಸರ್ಕಾರವು, ಸಂದರ್ಭವು ಅಗತ್ಯಪಡಿಸಬಹುದಾದಂಥ ಯಾವುದೇ ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ತನಗೆ ಅವಶ್ಯವೆಂದು ಕಂಡುಬರುವ ಯಾವುದೇ ಕಾರ್ಯವನ್ನು ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸಿ ಮಾಡಬಹುದು ಮತ್ತು ಯಾವುದೇ ಅಂಥ ಆದೇಶವು ಈ ಅಧಿನಿಯಮದಲ್ಲಿ ವಿಧಾಯಕ ಮಾಡಿದ್ದಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

(2) (1) ನೇ ಉಪ-ಪ್ರಕರಣದ ಮೇರೆಗೆ ಪ್ರಕಟಿಸಿದ ಪ್ರತಿಯೊಂದು ಆದೇಶವನ್ನು, ಅದನ್ನು ಪ್ರಕಟಿಸಿದ ತರುವಾಯ ಆದಷ್ಟು ಬೇಗ ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

**40. ನಿರಸನ.–** ಮುಂಬಯಿ ಪ್ರದೇಶದಲ್ಲಿ ಜಾರಿಯಲ್ಲಿರುವ ಮುಂಬಯಿ ಸೆಕೆಂಡರಿ ಶಾಲಾ ಪ್ರಮಾಣಪತ್ರ ಪರೀಕ್ಷಾ ಅಧಿನಿಯಮ, 1948 (1948ರ ಮುಂಬಯಿ ಅಧಿನಿಯಮ 49) ಇದನ್ನು [1][ಬೆಳಗಾಂ][1] ಪ್ರದೇಶದಲ್ಲಿ ಜಾರಿಗೆ ಬರುವಂತೆ ಈ ಮೂಲಕ ನಿರಸನಗೊಳಿಸಲಾಗಿದೆ.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1–11–1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**41.** [1]**[xxxx]**[1]

1. ಪ್ರಕರಣ 41 ಮತ್ತು ಅನುಸೂಚಿಯನ್ನು 2002ರ ಅಧಿನಿಯಮ ಸಂಖ್ಯೆ 13ರ ಮೂಲಕ 31–3–2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

* * * *

## ಅಧಿಸೂಚನೆಗಳು

### ಅಧಿಸೂಚ–I

**ಬೆಂಗಳೂರು, ದಿನಾಂಕ 1ನೇ ಅಕ್ಟೋಬರ್ 1966**
**[ಸಂಖ್ಯೆ ಇಡಿ 177 ಎಸ್‌ಎಂಎಕ್ಸ್ 66]**

**ಎಸ್‌ಓ 4517.–** ಮೈಸೂರು ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ ಅಧಿನಿಯಮ, 1966ರ (1966 ಮೈಸೂರು ಅಧಿನಿಯಮ ಸಂಖ್ಯೆ 16) 1ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸರ್ಕಾರವು, 1966ರ ಅಕ್ಟೋಬರ್ 5ನೇ ದಿವಸವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂಬುದಾಗಿ ಈ ಮೂಲಕ ಗೊತ್ತುಪಡಿಸಿದೆ.

ಮೈಸೂರು ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಬಿ.ಆರ್ ವರ್ಮಾ
ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

### ಅಧಿಸೂಚನೆ – II

**ಸಂಖ್ಯೆ: ಇಡಿ 2 ಎಂಇಎಸ್ 95, ಬೆಂಗಳೂರು, ದಿನಾಂಕ: 30ನೇ ಮೇ 1995**

**ಎಸ್‌ಓ. 522.–** ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ (1995ರ ಕರ್ನಾಟಕ ಅಧಿನಿಯಮ ಸಂಖ್ಯೆ 1) 1ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 1995ರ ಜೂನ್ 1ನೇ ದಿವಸವನ್ನು ಸದರಿ ಅಧಿನಿಯಮದ ಎಲ್ಲಾ ಉಪಬಂಧಗಳು ಜಾರಿಗೆ ಬರತಕ್ಕ ದಿವಸ ಎಂಬುದಾಗಿ ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಎಂ. ಪಂಕಜ
ಸರ್ಕಾರದ ವಿಶೇಷ ಅಧಿಕಾರಿ ಮತ್ತು
ಪದನಿಮಿತ್ತ ಉಪಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಯೋಜನೆ).

The above translation of the Karnataka Secondary Education Examination Board Act, 1966 (16 of 1966) shall be authoritative text in Kannada Language under section 5A of the Karnataka Official Language Act, 1963 (Karnataka Act No.26 of 1963)

GOVERNOR OF KARNATAKA

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಮ.ರಾ. ಹೆಗಡೆ
ಸರ್ಕಾರದ ಕಾರ್ಯದರ್ಶಿ,

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.